Swabhimani Sahakari
Pages : 34 / 20₹
# ಸ್ವಾಭಿಮಾನಿ ಸಹಕಾರಿ
ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ
ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ
Volume - 21
Issue - 11
November - 2024

## 71ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024
**ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ**

**20 ನವೆಂಬರ್, 2024,**
**ಬುಧವಾರ ಬೆಳಗಾವಿಯಲ್ಲಿ**



ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ
**ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ**
**ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ**
**ಸಹಕಾರ ಸಂಸ್ಥೆಗಳ ಪಾತ್ರ**

ನವೆಂಬರ್ 2
ದೀಪಾವಳಿ



ಬೆಳಗು ಬಾ ಹಣತೆಯನು
ನನ್ನೆದೆಯ ಗುಡಿಯಲ್ಲಿ
ದಿವ್ಯ ದೀಪಾವಳಿಯ
ಶುಭ ಘಳಿಗೆಯಲ್ಲಿ

ನವೆಂಬರ್ 18
ಕನಕದಾಸ ಜಯಂತಿ



ನವೆಂಬರ್ 1
ಕನ್ನಡ ರಾಜ್ಯೋತ್ಸವ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6368

ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1683



ಜಿ. ನಂಜನಗೌಡ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವ', ದೀಪಾವಳಿ, 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾಗೂ ಕನಕದಾಸ ಜಯಂತಿ, ಗುರುನಾನಕ್ ಜಯಂತಿಯ ಹಾರ್ದಿಕ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಈ ಮಾಹೆಯಲ್ಲಿ ಎರಡು ವಿಶೇಷ ದಿನಗಳ ಆಚರಣೆಗಳಿಗೆ ಅವಕಾಶ. ಒಂದನೇಯದಾಗಿ ನವೆಂಬರ್ ಒಂದರಿಂದ ಒಂದು ತಿಂಗಳು ದಿನಗಳ ಕಾಲ ಕನ್ನಡ ರಾಜ್ಯೋತ್ಸವವನ್ನು ರಾಜ್ಯದ ಎಲ್ಲಾ ಸಹಕಾರಿಗಳು ಆಚರಿಸುವುದರೊಂದಿಗೆ ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಳ ರಕ್ಷಣೆಗೆ ಪ್ರತಿಜ್ಞೆ ಸ್ವೀಕರಿಸಬೇಕು ಮತ್ತು ಅದರಂತೆ ನಡೆಯುವ ಕ್ರಮವಿಡಬೇಕು.

# ಸಹಕಾರ ಸಪ್ತಾಹ ಆಚರಣೆ – ಕ್ಷೇತ್ರದ ಅಭಿವೃದ್ಧಿಯ ಮೆಟ್ಟಿಲು

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವ, ದೀಪಾವಳಿ, 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾಗೂ ಕನಕದಾಸ ಜಯಂತಿ, ಗುರುನಾನಕ್ ಜಯಂತಿಯ ಹಾರ್ದಿಕ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಈ ಮಾಹೆಯಲ್ಲಿ ಎರಡು ವಿಶೇಷ ದಿನಗಳ ಆಚರಣೆಗಳಿಗೆ ಅವಕಾಶ. ಒಂದನೇಯದಾಗಿ ನವೆಂಬರ್ ಒಂದರಿಂದ ಒಂದು ತಿಂಗಳು ದಿನಗಳ ಕಾಲ ಕನ್ನಡ ರಾಜ್ಯೋತ್ಸವವನ್ನು ರಾಜ್ಯದ ಎಲ್ಲಾ ಸಹಕಾರಿಗಳು ಆಚರಿಸುವುದರೊಂದಿಗೆ ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಳ ರಕ್ಷಣೆಗೆ ಪ್ರತಿಜ್ಞೆ ಸ್ವೀಕರಿಸಬೇಕು ಮತ್ತು ಅದರಂತೆ ನಡೆಯುವ ಕ್ರಮವಿಡಬೇಕು. ಎರಡನೇಯದಾಗಿ ನವೆಂಬರ 14 ರಿಂದ ನವೆಂಬರ್ 20 ರವರೆಗೆ ರಾಷ್ಟ್ರಾದ್ಯಂತ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯನ್ನು ತಮ್ಮ ಸೌಹಾರ್ದ ಸಹಕಾರಿಗಳಲ್ಲೂ ಅರ್ಥ ಪೂರ್ಣವಾಗಿ ಆಚರಿಸುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಯ ಮೆಟ್ಟಿಲು ಎಂದು ಪರಿಗಣಿಸಬಹುದಾಗಿದೆ. ಕಳೆದ 70 ವರ್ಷಗಳಿಂದ ರಾಷ್ಟ್ರದಾದ್ಯಂತ ಈ ರೀತಿ ಸಹಕಾರ ಸಪ್ತಾಹವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ (ಐ.ಸಿ.ಎ) ಮಾರ್ಗದರ್ಶನದಂತೆ ರಾಷ್ಟ್ರೀಯ ಸಹಕಾರಿ ಯೂನಿಯನ್‌ನವರ ಏಳು ದಿನಗಳ ಸಹಕಾರ ಸಪ್ತಾಹದ ಆಚರಣೆಯ ಬಗ್ಗೆ ನೀಡುವ ಮಾರ್ಗಸೂಚಿಗಳನ್ನು ಅನುಸರಿಸಿ ಸಪ್ತಾಹದ ಆಚರಣೆ ನಡೆಸಲಾಗುತ್ತದೆ. ಪ್ರತಿ ವರ್ಷದ ಸಹಕಾರಿ ಸಪ್ತಾಹ ಆಚರಣೆಗೆ ಒಂದು ಧ್ಯೇಯವನ್ನು ಆಧರಿಸಿ ಸಪ್ತಾಹದ ಏಳು ದಿನಗಳನ್ನು ಸಹಕಾರಿ ಕ್ಷೇತ್ರದ ಒಂದೊಂದು ವಿಷಯಕ್ಕೆ ಒಂದೊಂದು ದಿನವನ್ನು ನಿಗದಿಪಡಿಸಿ ಆಯಾ ದಿನಗಳಂದು ಸದರಿ ಕ್ಷೇತ್ರದ ಎಲ್ಲಾ ಸಹಕಾರಿಗಳು ಒಂದು ಗೂಡಿ ಕಾರ್ಯಕ್ರಮವನ್ನು ನಿರ್ವಹಿಸಬೇಕಾಗುತ್ತದೆ. ಈ ವರ್ಷದ ಸಪ್ತಾಹದ ಧ್ಯೇಯ "ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬುದಾಗಿದೆ. ಈ ಧ್ಯೇಯವನ್ನು ಸಹಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದಲ್ಲಿ ಸಹಕಾರ ಕ್ಷೇತ್ರಕ್ಕೆ ಉತ್ತಮ ಭವಿಷ್ಯವನ್ನು ರೂಪಿಸಿದಂತಾಗುತ್ತದೆ.

ಸಹಕಾರ ಸಪ್ತಾಹದ ಆಚರಣೆಗಾಗಿ ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಸಹಕಾರ ಸಪ್ತಾಹವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚ–ರಿಸಲು ಹಾಗೂ ಸಹಕಾರಿ ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲು ಕಾರ್ಯಸೂಚಿಯನ್ನು ಸಿದ್ಧಪಡಿಸಲಾಗಿದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಸಪ್ತಾಹದ ಆಚರಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು. ಸಹಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ವ್ಯಾಪಕ ಪ್ರಚಾರವಾಗುವಂತೆ ಸದರಿ ದಿನದಂದು ತಮ್ಮ ಸಂಸ್ಥೆಗಳ ಮೇಲೆ ಸಪ್ತ ವರ್ಣದ ಸಹಕಾರಿ ಧ್ವಜಾವನ್ನು ಹಾರಿಸುವುದರ ಮೂಲಕ ಜನರಿಗೆ ತಮ್ಮ ಅಸ್ತಿತ್ವದ ಬಗ್ಗೆ ಪರಿಚಯಿಸಬೇಕು. ನಂತರ ಸಹಕಾರಿ ಕ್ಷೇತ್ರದ ವಿವಿಧ ವಿಷಯಗಳ ಬಗ್ಗೆ ಚಿಂತನ–ಮಂಥನ, ವಿಚಾರಗೋಷ್ಠಿ, ಸಭೆ–ಸಮಾರಂಭಗಳನ್ನು ಏರ್ಪಡಿಸಿ ಇದುವರೆಗಿನ ಕಾರ್ಯಚಟುವಟಿಕೆಗಳ ಅವಲೋಕನ ಮಾಡಿ ಮುಂಬರುವ ದಿನಗಳಲ್ಲಿ ಸಹಕಾರಿಯು ಹಮ್ಮಿಕೊಳ್ಳಬಹುದಾದ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವುದು ಹಾಗೂ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ಕ್ಷೇತ್ರವನ್ನು ಬಲಪಡಿಸುವಂತಾಗಬೇಕು, ಅಭಿವೃದ್ಧಿಯ ಹರಿಕಾರರಾಗಬೇಕು. ಸಹಕಾರ ಕ್ಷೇತ್ರದ ಬಗ್ಗೆ ಸಹಕಾರಿಗಳಿಗೆ, ಸಾರ್ವಜನಿಕರಿಗೆ ವಿಶ್ವಾಸಾರ್ಹತೆ ಹೆಚ್ಚಿಸುವಂತೆ ಕ್ರಮವಿಡುವುದು ಸಹಕಾರಿಗಳ ನಡೆಯಾಗಬೇಕು.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–22
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 23–24
**ಲೇಖನಗಳು :**
ಒಂದು ಸಹಕಾರ/ಸಹಕಾರಿ ಸಂಸ್ಥೆಯು ಆಡಳಿತ ಮಂಡಳಿ ಸದಸ್ಯ ಸಾಮಾನ್ಯ ಸಭೆಯ ಸದಸ್ಯನೇ? – ಒಂದು ವಿಮರ್ಷೆ........................ 26–27
ಪ್ರತಿ ಕನ್ನಡಿಗನ, ಕರುನಾಡಿನ ಹೆಮ್ಮೆಯ ಕನ್ನಡ ರಾಜ್ಯೋತ್ಸವ ................................. 31–31
"ಸಾಮಾನ್ಯ ಸೇವಾ ಕೇಂದ್ರ" Comon Service Center (CSC) ಗ್ರಾಮೀಣ ಭಾಗಕ್ಕೂ ಡಿಜಿಟಲ್ ಸೇವೆಗಳ ಸೌಲಭ್ಯ ........................ 32–34

# ಸಂಪಾದಕೀಯ

## ವ್ಯವಸ್ಥೆಯ ದಕ್ಷತೆ ಹಾಗೂ ಕ್ರಿಯಾಶೀಲತೆ ಅಭಿವೃದ್ಧಿಯ ಜೀವಾಳ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸುವ ಈ ಸಂದರ್ಭದಲ್ಲಿ ಸಹಕಾರ ಸಪ್ತಾಹದ ಆಚರಣೆ ಪರಿಣಾಮಕಾರಿಯಾಗಿರಬೇಕು. ಸಾರ್ಥಕತೆಯಿಂದ ಕೂಡಿರಬೇಕು. ಸಹಕಾರ ಕ್ಷೇತ್ರದ ಅಭಿವೃದ್ಧಿಯಾಗಬೇಕು ಎಂಬದು ಎಲ್ಲರ ನಿರೀಕ್ಷೆ.

ದಿನಾಂಕ 22–10–2024 ರಂದು 71ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಮಾನ್ಯ ಸಹಕಾರ ಸಚಿವರು ಈ ಸಹಕಾರ ಕ್ಷೇತ್ರದ ವ್ಯವಸ್ಥೆಯಲ್ಲಿ ಕ್ರಿಯಾಶೀಲತೆಯಲ್ಲಿ ಅಭಿವೃದ್ಧಿಯಾಗುವುದು ಅಗತ್ಯ ಎಂದು ತಿಳಿಸಿರುವುದು ಸಮಯೋಚಿತವೆಂದು ಹೇಳಬಹುದು. ವ್ಯವಸ್ಥೆಗಳು ಅಭಿವೃದ್ಧಿಯಾಗಬೇಕಾದುದು, ಕ್ರಿಯಾಶೀಲವಾಗಬೇಕಾದುದು ಅತಿ ಅವಶ್ಯಕ. ಹಾಗೆಂದ ಮಾತ್ರಕ್ಕೆ ಈಗ ನಿಷ್ಕ್ರೀಯವಾಗಿವೆ ಎಂದು ಅರ್ಥೈಸಬಾರದು. ಈಗಲೂ ಸಾಕಷ್ಟು ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಉತ್ತಮ ಪ್ರಗತಿಯನ್ನು ಸಾಧಿಸಿವೆ. ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದಲ್ಲಿಯೇ ದೊಡ್ಡದು. ಮಾನ್ಯ ಸಹಕಾರ ಸಚಿವರ ಹಾಗೂ ಸಹಕಾರಿ ತಜ್ಞರ ಅಭಿಪ್ರಾಯದಂತೆ ಈ ಚಳುವಳಿ ಇನ್ನೂ ಹೆಚ್ಚು ದಕ್ಷತೆಯಿಂದ ಹಾಗೂ ಹೆಚ್ಚು ಕ್ರಿಯಾಶೀಲವಾಗಬೇಕು ಎಂಬುದಾಗಿದೆ.

ಆದ್ದರಿಂದ ಈ ಹಿನ್ನೆಲೆಯಲ್ಲಿ ಸಹಕಾರಿಗಳು ಮತ್ತು ಸರಕಾರಿ ಅಧಿಕಾರಿಗಳು ಹಲವಾರು ಕ್ರಮಗಳನ್ನು ಅನುಸರಿಸಬೇಕಿದೆ. ಸಹಕಾರಿಗಳು ಸಹಕಾರಿ ತತ್ವಗಳನ್ನು ಸಹಕಾರಿ ಕಾಯ್ದೆಗಳ ಆಶಯವನ್ನು, ಸಹಕಾರಿ ಸಂಸ್ಥೆಗಳ ಉಪನಿಬಂಧನೆಗಳನ್ನು, ಸಹಕಾರಿ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು ಅಗತ್ಯ. ಜೊತೆಗೆ ಆಡಳಿತದಲ್ಲಿ ಪಾರದರ್ಶಕತೆ, ವೃತ್ತಿಪರತೆಯನ್ನು ಬೆಳೆಸಿಕೊಳ್ಳಬೇಕು, ಉತ್ತಮ ನಾಯಕತ್ವದ ಗುಣಗಳನ್ನು ಮತ್ತು ಸದಸ್ಯರೊಡನೆ ಉತ್ತಮ ಬಾಂಧವ್ಯವನ್ನು ಹೊಂದಿರುವುದು ಅವಶ್ಯಕ.

ಅಧಿಕಾರಿಗಳು ಸಹಕಾರಿ ಇಲಾಖೆಯವರಾಗಿರಬಹುದು ಅಥವಾ ಸಹಕಾರಿ ಸಂಸ್ಥೆಗಳವರಾಗಿರಬಹುದು ಸದಸ್ಯರೊಡನೆ, ಸಾರ್ವಜನಿಕರೊಡನೆ (ಫ್ರೆಂಡ್, ಫಿಲಾಸಫರ ಅಂಡ್ ಗೈಡ) ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಗಳಂತೆ ಕಾರ್ಯನಿರ್ವಹಿಸುವುದು ಅವಶ್ಯಕ. ಸಹಕಾರಿ ಕ್ಷೇತ್ರ ತನ್ನ ದಕ್ಷತೆಯನ್ನು ಹಾಗೂ ಕ್ರೀಯಾಶೀಲತೆಯನ್ನು ಬೆಳೆಸಿಕೊಳ್ಳಬೇಕಾದರೆ ಅಧಿಕಾರಿಗಳು ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಸದಸ್ಯರನ್ನು ಸಕ್ರೀಯ ಸದಸ್ಯರನ್ನಾಗಿಸಬೇಕಾಗುತ್ತದೆ. ಸದಸ್ಯರ ಅವಶ್ಯಕತೆಗಳಿಗನುಸಾರವಾಗಿ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಸಿದ್ಧಪಡಿಸಿ ಪ್ರಾಮಾಣಿಕವಾಗಿ ದಕ್ಷತೆಯಿಂದ ಅನುಷ್ಠಾನಗೊಳಿಸಬೇಕಾಗುತ್ತದೆ.

ಗಮನಿಸಬೇಕಾದ ಹಾಗೂ ಪಾಲಿಸಬೇಕಾದ ಇನ್ನೊಂದು ಮಹತ್ವದ ಅಂಶವೆಂದರೆ ರಾಜಕೀಯ ಹಸ್ತಕ್ಷೇಪ ಅಥವಾ ಬಾಹ್ಯ ಹಸ್ತಕ್ಷೇಪಗಳಿಗೆ ಅವಕಾಶವಾಗದಂತೆ ಮತ್ತು ಸಹಕಾರಿ ಸಂಸ್ಥೆಗಳು ಪಟ ಭದ್ರ ಹಿತಾಸಕ್ತಿಗಳ ಹಿಡಿತದಿಂದ ಹೊರಗೆ ಬರಬೇಕಾಗಿದೆ. ಹೆಚ್ಚೆ ಹೆಚ್ಚು ಯುವಕರು ಹಾಗೂ ಮಹಿಳೆಯರನ್ನು ಸಹಕಾರಿ ಕ್ಷೇತ್ರ ಬರಮಾಡಿಕೊಳ್ಳಬೇಕಿದೆ ಇಷ್ಟೆಲ್ಲ ವಿಷಯಗಳನ್ನು ಗಮನಿಸಿ ಅಧ್ಯಯನ ಮಾಡಿ ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದಾಗ ಸಹಕಾರ ಕ್ಷೇತ್ರ ಇನ್ನಷ್ಟು ಬಲಿಷ್ಟಗೊಳ್ಳುತ್ತದೆ. ಸಹಕಾರ ಕ್ಷೇತ್ರಕ್ಕೆ ಪರ್ಯಾಯವಾಗಿ ಯಾವ ಸಂಸ್ಥೆಯೂ ಕಾರ್ಯನಿರ್ವಹಿಸುವುದು ಕಷ್ಟಸಾಧ್ಯ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಮನೋದೌರ್ಬಲ್ಯ"

ಮನುಷ್ಯನು ಮನಸ್ಸಿನೊಂದಿಗೆ ಏಕರೂಪವಾಗಿದ್ದಾನೆ ಆದ್ದರಿಂದ ಮನುಷ್ಯನಿಂದ ಮನಸ್ಸನ್ನು ಎಂದಿಗೂ ಬೇರ್ಪಡಿಸಲಾಗದು. ಮನುಷ್ಯನ ಹಿರಿಮೆ ಗರಿಮೆಗಳೆಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ನಮ್ಮ ಮನಸ್ಸು ದೊಡ್ಡದಾದರೆ ನಾವೂ ದೊಡ್ಡವರಾಗುತ್ತೇವೆ. ಮಹಾತ್ಮರೆಂದರೆ ದೊಡ್ಡ ಮನಸ್ಸು ಉಳ್ಳವರೆಂದೇ ಅರ್ಥ. ನಮ್ಮ ಸಿರಿತನ – ಬಡತನ, ಸೋಲು–ಗೆಲವು ಪಾವಿತ್ರ್ಯತೆ–ಅಪಾವಿತ್ರ್ಯತೆ ಎಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ಇದನ್ನು ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಸುಂದರವಾಗಿ ತಿಳಿಸಿದ್ದಾರೆ.

ಮನೆ ನೋಡಾ. ಬಡವರೂ; ಮನ ನೋಡಾ, ಸಂಪನ್ನರು!
ಧನ ನೋಡಾ, ಬಡವರು; ಘನ ಮನ ಸಂಪನ್ನರು.
ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು.
ಆರಿಗೂ ಉಪಮಿಸಬಾರದು.

ಮಹಾತ್ಮರ ಮನೆ ಸಣ್ಣದಿರಬಹುದು, ಧನ ಕಡಿಮೆ ಇರಬಹುದು ಆದರೆ ಅವರ ಮನಸ್ಸು ದೊಡ್ಡದಾಗಿದೆ; ಹೃದಯ ಸಿರಿವಂತವಾಗಿದೆ. ಸಂಸಾರ ವಿಷಯ ವ್ಯಾಮೋಹವೆಂಬ ವೈರಿಯನ್ನೇ ಗೆದ್ದಿರುವ ಮಹಾತ್ಮರಾದ ಆ ಶರಣರನ್ನು ಯಾರೊಂದಿಗೆಯೂ ಹೋಲಿಸಲಾಗದು.

ವಿಲಿಯಂ ಜೇಮ್ಸ್ ಎಂಬ ಆಂಗ್ಲ ತತ್ತ್ವಜ್ಞಾನಿಯು "ಸ್ವರ್ಗ ನರಕಗಳು ನಮ್ಮ ಮನದ ರಚನೆ!" ಎಂದು ಹೇಳಿರುವನು. ಶರಣರಾದರೂ "ಸ್ವರ್ಗ ನರಕಗಳೆಂಬುವು ಬೇರಿಲ್ಲ ಕಾಣಿರೋ, ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ" ಎಂದು ಹೇಳಿರುವರು. ಅಯ್ಯಾ, ಅಣ್ಣಾ ಎಂದು ಎಲ್ಲರನ್ನು ಗೌರವಿಸುವಷ್ಟು ನಮ್ಮ ಮನಸ್ಸು ವಿಶಾಲವಾದರೆ ಅದೇ ಸ್ವರ್ಗ. ಎಲವೋ ಎಂದು ಅನ್ಯರನ್ನು ಅಗೌರವಿಸುವಷ್ಟು ನಮ್ಮ ಮನಸ್ಸು ಸಣ್ಣದಾದರೆ ಅದೇ ನರಕ ಎಂಬುದು ಇದರ ಭಾವಾರ್ಥ. ಹೀಗೆ ನಮ್ಮಮನಸ್ಸು ವಿಶಾಲವಾದರೆ ಜೀವನವೇ ಸ್ವರ್ಗಸದೃಶ್ಯವಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ನಮ್ಮ ಮನಸ್ಸು ವಿಶಾಲವಾಗಬೇಕಾದರೆ ಈ ಮನಸ್ಸಿನಲ್ಲಿರುವ ಮಾಲಿನ್ಯ ಅಥವಾ ಕಸವನ್ನು ನಾವು ತೆಗೆದುಹಾಕಬೇಕು. ಈ ಮನೋ ಮಾಲಿನ್ಯವನ್ನೇ ಪತಂಜಲಿ ಮಹರ್ಷಿಗಳು 'ಅಂತರಾಯಗಳು' ಎಂದು ಕರೆದಿರುವರು; ಅವುಗಳಲ್ಲಿ ಅತೃಪ್ತಿ, ಜಿಗುಪ್ಸೆ ಈ ಎರಡನ್ನು ನೋಡಿದ್ದೇವೆ. ಈಗ ಮೂರನೆಯದಾದ ಮನೋದೌರ್ಬಲ್ಯವನ್ನು ನೋಡೋಣ! ಸಣ್ಣ–ಪುಟ್ಟ ಪ್ರಾಪಂಚಿಕ ವಿಷಯಗಳಿಗೆ ನಮ್ಮ ಮನಸ್ಸು ಕೆಲವೊಮ್ಮೆ ಸೋಲುತ್ತದೆ. ಇದನ್ನೇ ಮನೋದೌರ್ಲಲ್ಯ ಎನ್ನುತ್ತಾರೆ.

ಯಾರಿಗೆ ದೇಹಬಲ ಮನೋಬಲ ಇಲ್ಲವೋ, ಅವರಿಗೆ ಆಕಾಶದಲ್ಲಿರುವ ಚಂದ್ರಬಲವು, ದೇವಬಲವು, ಏನು ಮಾಡಬಲ್ಲುದು? ದೇಹ–ಮನಸ್ಸು ನಮಗೆ ಅತ್ಯಂತ ಸಮೀಪದಲ್ಲಿರುವಂಥವು. ಈ ದೇಹ–ಮನಸ್ಸೇ ದುರ್ಬಲವಾದಾಗ ದೂರದಲ್ಲಿರುವ ಚಂದ್ರಬಲವಾಗಲಿ, ತಾರಾಬಲವಾಗಲಿ ಏನು ತಾನೇ ಮಾಡಲು ಸಾಧ್ಯ? ಅಮೌಲ್ಯವಾದ ಆಧ್ಯಾತ್ಮಿಕ ವಿಷಯಗಳನ್ನು ಓದುತ್ತಿರುವಾಗ ಅಥವಾ ಕೇಳುತ್ತಿರುವಾಗಲೂ ಒಂದು ಸಣ್ಣ ಶಬ್ದವಾದರೂ ನಮ್ಮ ಮನಸ್ಸು ಅತ್ತ ಹರಿದು ಬಿಡುತ್ತದೆ. ನಮ್ಮ ಅಧ್ಯಯನ ಅಥವಾ ಸತ್–ಶ್ರವಣ ನಿಂತೇ ಹೋಗುತ್ತದೆ.

ವಿದೇಶಿಯ ತತ್ತ್ವಜ್ಞಾನಿ ವರ್ಜನಿಯಾ ವೂಲ್ಫ ಹೇಳುತ್ತಾರೆ. "ಅತ್ಯಂತ ಚಂಚಲವಾದ ಕೀಟ ಅಥವಾ ಹುಳವೆಂದರೆ ನಮ್ಮ ಮನಸ್ಸು, ಅದು ನಿರಂತರ ಹರಿದಾಡುತ್ತಿರುತ್ತದೆ." ಒಂದು ಸುಂದರವಾದ ಗುಡ್ಡವನ್ನು ನೋಡುತ್ತ ಸೃಷ್ಟಿಸೌಂದರ್ಯ ಸವಿಯುವುದರಲ್ಲಿ ನಾವು ಮಗ್ನರಾಗುತ್ತೇವೆ. ತಕ್ಷಣ ನಮ್ಮ ಮನಸ್ಸು – "ಇದಕ್ಕಿಂತಲೂ ಇನ್ನೊಂದು ಗುಡ್ಡ ಚನ್ನಾಗಿದೆ: ಸ್ವಲ್ಪೇ ದೂರದಲ್ಲಿದೆ" ಎಂದು ನಮ್ಮ ಲಕ್ಷ್ಯವನ್ನು ಬೇರೆ ಕಡೆಗೆ ಎಳೆದು ಬಿಡುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 8757 | 933 | 1382 | 675 | 11,747 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 5597 | 558 | 832 | 354 | 7,341 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 3160 | 375 | 550 | 321 | 4,406 |
| ಅಕ್ಟೋಬರ್ 2024ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 320 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 648 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6430 | 1116 | 1980 | 699 | 10225 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 974 | 204 | 463 | 145 | 1786 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5456 | 912 | 1517 | 554 | 8439 |
| ಅಕ್ಟೋಬರ್ ತಿಂಗಳಿನಲ್ಲಿ ಒಟ್ಟು 60 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |



# ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗಾಗಿ ಸಾಲ ನೀಡಿಕೆ ಮತ್ತು ಸಾಲ ವಸೂಲಾತಿ ನಿರ್ವಹಣೆ ತರಬೇತಿ ಕಾರ್ಯಕ್ರಮ

## ಸಕಾಲದಲ್ಲಿ ಸಾಲ ವಸೂಲಾತಿ ಪ್ರಕ್ರೀಯೆಯಲ್ಲಿ ವಸೂಲಾತಿ ಅಧಿಕಾರಿಗಳ ಪಾತ್ರ ಮಹತ್ವದ್ದು - ಶ್ರೀಮತಿ ಗಗನ ಕೆ.



**ಬೆಂಗಳೂರು :** ರಾಜ್ಯದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಾಲ ವಸೂಲಾತಿ ಅಧಿಕಾರಿಗಳಿಗಾಗಿ 19 ಅಕ್ಟೋಬರ್ 2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀಮತಿ ಗಗನ ಕೆ. ರವರು ಉದ್ಘಾಟಿಸಿದರು. ನಂತರ ಮಾತನಾಡಿದ ಪೀಠಾಧಿಕಾರಿ ಶ್ರೀಮತಿ ಗಗನ. ಕೆ ರವರು ಸಹಕಾರ ಸಂಸ್ಥೆಗಳ ಜೀವಾಳವೆಂದರೆ ಠೇವಣಾತಿಗಳು ಮತ್ತು ಸಾಲ ನೀಡುವುದು. ಸಾಲ ನೀಡುವಾಗ ಹೆಚ್ಚು ಕಾಳಜಿ ವಹಿಸಿ ನೀಡಿದಲ್ಲಿ ಸಾಲ ವಸೂಲಾತಿ ಸಮಸ್ಯೆ ಆಗುವುದಿಲ್ಲ. ಸಾಲ ವಸೂಲಾತಿ ಕ್ರಮದಲ್ಲಿ ವಸೂಲಾತಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಕಾಯ್ದೆಯಾನುಸಾರ ಎಲ್ಲ ವಿಧಿ ವಿಧಾನಗಳನ್ನು ಚಾಚೂ ತಪ್ಪದೇ ಅನುಸರಿಬೇಕು. ದಾವಾ ದಾಖಲಾತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೆ ಮಾಡಬೇಕು. ಎವಿಡೆನ್ಸ್‌ಗಳು ಇದ್ದಾಗ ಬೇರೆಯವರಿಗೆ ಅಧಿಕಾರ ನೀಡಬಹುದು. ದಾವಾ ದಾಖಲಾತಿಗಳ ಅರ್ಜಿಗಳನ್ನು ಸದಸ್ಯರಿಂದಲೇ ಮಾಡಿಸಬೇಕು. ಸಂಸ್ಥೆಯ ಅಧಿಕಾರಿಗಳು ಬರೆಯಬಾರದು. ಸಾಲ ಬಿಡುಗಡೆ ಸಂದರ್ಭದಲ್ಲಿ ಸಾಲಗಾರ ಸದಸ್ಯರ ಕುಟುಂಬದವರಿಗೆ ಸದಸ್ಯರು ಸಾಲ ಪಡೆದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಬೇಕು. ದಾವಾ ದಾಖಲಾತಿ ಸಂದರ್ಭದಲ್ಲಿ ಲಗತ್ತಿಸಬಹುದಾದ ಎಲ್ಲ ಜೆರಾಕ್ಸ್ ದಾಖಲಾತಿಗಳನ್ನು ಮುಖ್ಯಕಾರ್ಯನಿರ್ವಾಹಕರು ಧೃಡೀಕರಿಸುವುದು ಅವಶ್ಯಕ. ಎಂದು ತಿಳಿಸಿದರು. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡುವ ವ್ಯವಸ್ಥೆಯಾಗಬೇಕೇಂದು ತಿಳಿಸಿದರು.



## ಸಾಲ ವಸೂಲಾತಿ ಅಧಿಕಾರಿಗಳದ್ದು ಜವಾಬ್ದಾರಿಯುತ ಕೆಲಸ - ಶ್ರೀ ಜಿ. ನಂಜನಗೌಡ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮಾತನಾಡುತ್ತ ಸಂಯುಕ್ತ ಸಹಕಾರಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಕ್ಷೇತ್ರದ ಎಲ್ಲ ವರ್ಗಗಳ ಸಹಕಾರಿಗಳಿಗಾಗಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಪ್ರಸಕ್ತ ಪಟ್ಟಣ ಸಹಕಾರಿ ಬ್ಯಾಂಕುಗಳ ಸಾಲ ವಸೂಲಾತಿ ಅಧಿಕಾರಿಗಳಿಗಾಗಿ ಒಂದು ವಿಶೇಷ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ವಿಶೇಷವಾಗಿ ಸಾಲ ನೀಡುವಾಗ ದಾಖಲೆಗಳ ನಿರ್ವಹಣೆಗೆ ಮಹತ್ವ ನೀಡಬೇಕು. ಸಾಲದ ವ್ಯಾಲ್ಯುಯೇಶನ್ ಕ್ರಮಬದ್ಧವಾಗಿರಬೇಕು. ಹಣಕಾಸಿನ ನಿರ್ವಹಣೆ ಚೆನ್ನಾಗಿ ಮಾಡಬೇಕು. ಸಾಲ ಬಿಡುಗಡೆಗೆ ಮುನ್ನ ಸಾಲ ಮಂಜೂರಾತಿ ಆದೇಶ ನೀಡಬೇಕು. ನಾಮಿನೇಶನ್ ಸರಿಯಾಗಿ ಮಾಡಬೇಕು. ಮರುಸಾಲ ವಿತರಣೆ ಸಂದರ್ಭಗಳಲ್ಲಿ ಮಾರ್ಟ್‌ಗೇಜ್ ಸರಿಯಾಗಿರಬೇಕು. ಸಹಕಾರಿಗಳ ಅಧ್ಯಕ್ಷರು ಚೆಕ್‌ಗಳಿಗೆ ಸಹಿ ಮಾಡುವ ಅಧಿಕಾರವನ್ನು ಮು.ಕಾ.ನಿ.ಗಳಿಗೆ ವಹಿಸಿಕೊಡಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ರೇಣುಕರವರಿಂದ ಪ್ರಾರ್ಥನೆ, ಶ್ರೀ ಶಿವಕುಮಾರ ಬಿರಾದಾರರವರಿಂದ ಸ್ವಾಗತವಾದ ನಂತರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಯುಕ್ತ ಸಹಕಾರಿಯ ವಿವಿಧ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ ಇಂದಿನ ಕಾರ್ಯಕ್ರಮ ವಿಶೇಷವಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಯಲ್ಲಿ ಸಾಲ ವಸೂಲಾತಿ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತದೆ ಆದ್ದರಿಂದ ಸಾಲ ವಸೂಲಾತಿ ಅಧಿಕಾರಿಗಳಿಗೆ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದ ತಿಳಿಸಿದರು. ಅಧಿಕಾರಿ ಶ್ರೀ ಗಂಗಾರಾಮರವರು ನಿರೂಪಣೆ ಮಾಡಿದರು. ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರರವರು, ನಿರ್ದೇಶಕರಾದ ಶ್ರೀ

ನಾಗರಾಜ ದೇಶಪಾಂಡೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ ಶ್ರೀ ಪ್ರೇಮಾನಂದರವರು ಉಪಸ್ಥಿತರಿದ್ದರು. ಶ್ರೀ ಪ್ರೇಮಾನಂದರವರು ಸಾಲ ವಸೂಲಾತಿ ಪ್ರಕ್ರೀಯೆಗಳ ಬಗ್ಗೆ ಶ್ರೀ ದರ್ಶನರವರು ಗುಣಾತ್ಮಕ ಸಾಲ ನೀಡಿಕೆ ದಾಖಲಾತಿಗಳ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 16 ಬ್ಯಾಂಕುಗಳಿಂದ 62 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ

## ಸಹಕಾರಿ ಕ್ಷೇತ್ರದ ಕಾರ್ಯದಕ್ಷತೆ ಹಾಗೂ ಕ್ರೀಯಾಶೀಲತೆ ಹೆಚ್ಚಿಸಿ : ಶ್ರೀ ಕೆ.ಎನ್. ರಾಜಣ್ಣ



**ಬೆಂಗಳೂರು :** ದಿನಾಂಕ 22–10 2024 ರಂದು ಸಹಕಾರ ಸಚಿವ ಶ್ರೀ ಕೆ.ಎನ್. ರಾಜಣ್ಣ ರವರ ಅಧ್ಯಕ್ಷತೆಯಲ್ಲಿ ದಿನಾಂಕ 14–11–2024 ರಿಂದ 20–11–2024ರ ವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಬಗ್ಗೆ ಸಭೆ ನಡೆಸಲಾಯಿತು. ಸಭೆಯಲ್ಲಿ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ.ಎಸ್. ನವೀನರವರು ಸ್ವಾಗತ ಕೋರಿದ ನಂತರ ಮಹಾಮಂಡಳದ ಅಧ್ಯಕ್ಷ ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೆಗೌಡರವರು ಸಹಕಾರಿ ಸಪ್ತಾಹದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಮಾಜಿ ಅಧ್ಯಕ್ಷರೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ ಅಧಿಕಾರಿಗಳು ರಾಜ್ಯದ ಮಹಾಮಂಡಳಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಸಹಕಾರ ಇಲಾಖೆಯ ನಿಬಂಧಕರಾದ ಶ್ರೀ ಟಿ.ಹೆಚ್.ಎಂ. ಕುಮಾರ್ ಐ.ಎ.ಎಸ್, ಇಲಾಖೆಯ ಹಿರಿಯ ಅಧಿಕಾರಿಗಳು, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರುಗಳು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅನೇಕ ಸಹಕಾರಿ ಪ್ರಮುಖರು ಉಪಸ್ಥಿತರಿದ್ದು ಸಹಕಾರ ಸಪ್ತಾಹ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಿದರು.

ಸಭೆಯ ಸಂದರ್ಭದಲ್ಲಿ ಹಲವಾರು ಸಹಕಾರಿಗಳು ಅನೇಕ ವಿಷಯಗಳ ಪ್ರಸ್ತಾಪಿಸಿದರು. ಎಲ್ಲ ವಿಷಯಗಳ ಬಗ್ಗೆ ಮಾನ್ಯ ಸಹಕಾರ ಸಚಿವರು ಸೂಕ್ತ ಉತ್ತರಗಳನ್ನು ನೀಡಿದರು. ವಿಶೇಷವಾಗಿ ಸಹಕಾರಿ ಸಂಸ್ಥೆಗಳಲ್ಲಿ ಪ್ರಕ್ರೀಯೆಯನ್ನು ಸರಳೀಕರಿಸುವುದಕ್ಕಾಗಿ ಅಧಿಕಾರ ವಿಕೇಂದ್ರೀಕರಣ ಗೊಳಿಸಲಾಗುವುದು ಮತ್ತು ಚುನಾವಣಾ ವೆಚ್ಚಗಳ ನಿರ್ವಹಣೆಗೆ ಕಡಿವಾಣ ಹಾಕಲಾಗುವುದು ಸಹಕಾರ ಕ್ಷೇತ್ರದ ಬಗ್ಗೆ ಯುವಕರಲ್ಲಿ ಆಸಕ್ತಿ ಹುಟ್ಟಿಸುವುದಕ್ಕಾಗಿ ಶಾಲಾ ಕಾಲೇಜುಗಳಲ್ಲಿ ಮತ್ತು ಪ್ರಾಥಮಿಕ ಹಂತದಲ್ಲಿ ಪಠ್ಯಕ್ರಮವನ್ನು ಅಳವಡಿಸುವುದರ ಬಗ್ಗೆ ಸಮಿತಿಯೊಂದನ್ನು ರಚಿಸಲಾಗುವುದು ಎಂದು ತಿಳಿಸುತ್ತ ಒಟ್ಟಾರೆ ಸಹಕಾರಿ ಸಪ್ತಾಹ ಸಹಕಾರಿ ಆಂದೋಲನದ ಘನತೆ ಗೌರವಗಳನ್ನು ಎತ್ತಿ ಹಿಡಿಯುವ ಮತ್ತು ಸಹಕಾರಿ ವ್ಯವಸ್ಥೆಯ ದಕ್ಷತೆ ಹಾಗೂ ಕ್ರೀಯಾಶೀಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಡೆಯಬೇಕು ಎಂದು ತಿಳಿಸಿದರು.

ದಿನಾಂಕ 8–12–2024 ರಂದು ಶ್ರೀ ಕೆ. ಹೆಚ್. ಪಾಟೀಲ್‌ರವರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಸಹಕಾರ ಚಳುವಳಿ ಎಂಬ ಶೀರ್ಷಿಕೆಯಡಿಯಲ್ಲಿ ಸಹಕಾರಿ ಸಮಾವೇಶವನ್ನು ಏರ್ಪಡಿಸಲಾಗುತ್ತದೆ. ರಾಷ್ಟ್ರ ಮಟ್ಟದ ಹಿರಿಯ ಸಹಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

2025

International Year of Cooperatives

Cooperatives Build a Better World

## 2025 ಅಂತರರಾಷ್ಟ್ರೀಯ ಸಹಕಾರಿ ವರ್ಷ : ವಿಶ್ವಸಂಸ್ಥೆ ಘೋಷಣೆ ಹಾಗೂ ಲೋಗೊ ಬಿಡುಗಡೆ

ವಿಶ್ವಸಂಸ್ಥೆಯು (ಯುಎನ್‌ಓ) ರವರು ಸಹಕಾರ ಕ್ಷೇತ್ರದ ಸಾಧನೆಗಳನ್ನು ಪರಿಗಣಿಸಿ ಸಹಕಾರ ಕ್ಷೇತ್ರದ ಮೂಲಕ ಉತ್ತಮ ಸಮಾಜ ಹಾಗೂ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯವೆಂಬುದನ್ನು ಮನಗಂಡಿದ್ದಾರೆ. ಈ ಕ್ಷೇತ್ರ ಇನ್ನೂ ಹೆಚ್ಚು ಸಧೃಡವಾಗಬೇಕು. ಸಮಾಜದ ಎಲ್ಲಾ ವರ್ಗದ ಜನರಿಗೆ ಆರ್ಥಿಕ, ಸಾಮಾಜಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯನಿರ್ವಹಿಸಬೇಕು ಎಂದು 2025ನ್ನು ಅಂತರರಾಷ್ಟ್ರೀಯ ಸಹಕಾರ ವರ್ಷವೆಂದು ಸಾರಿದ್ದಾರೆ. ಸಹಕಾರಿಗಳು ಈ ವರ್ಷದಲ್ಲಿ ಹೆಚ್ಚಿನ ಸಾಧನೆಗಳನ್ನು ಮಾಡಲು ಸಾಧ್ಯವಾಗಲಿ, ಈ ಕ್ಷೇತ್ರ ಇನ್ನೂ ಹೆಚ್ಚು ಬಲಯುತವಾಗಲಿ ಎಂದು ತಿಳಿಸಿದ್ದಾರೆ.

# ದಿನಾಂಕ 20–11–2024 ರಂದು ಬೆಳಗಾವಿಯಲ್ಲಿ ನಡೆಯುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದ ಪೂರ್ವಭಾವಿ ಸಿದ್ಧತಾ ಸಭೆ ಕಾಲೇಜುಗಳಲ್ಲಿ ಸಹಕಾರ ಶಿಕ್ಷಣ ಅಭಿಯಾನ



**ಬೆಳಗಾವಿ :** ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 20.11.2024ರಂದು ಬೆಳಗಾವಿಯಲ್ಲಿ ನಡೆಯಲಿರುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದ ಕುರಿತು ದಿನಾಂಕ 04.11.2024ರಂದು ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಪೂರ್ವಭಾವಿ ಸಿದ್ದತಾ ಸಭೆಯನ್ನು ಆಯೋಜಿಸಲಾಗಿತ್ತು.

**71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸುವಂತಾಗಲಿ : ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ದಿನಾಂಕ 04.11.2024ರಂದು ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ತಿಳಿಸಿದರು. ಬೆಳಗಾವಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿ ಯಶಸ್ಸಿಗೆ ಸಹಕರಿಸಬೇಕು ಎಂದು ತಿಳಿಸಿದರು.

**ಯುವಕರು ಈ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಭಾಗವಹಿಸುವಂತೆ ಕ್ರಮದ ಅಗತ್ಯ ಹಾಗೂ ಕಾಲೇಜುಗಳಲ್ಲಿ ಸಹಕಾರ ಕ್ಷೇತ್ರದ ಕುರಿತು ಶಿಕ್ಷಣ ಕಾರ್ಯಕ್ರಮ ಜರುಗಿಸಲು ಕರೆ : ಶ್ರೀ ಜಗದೀಶ ಕವಟಗಿಮಠ, ಮಾನ್ಯ ನಿರ್ದೇಶಕರು, ಕ. ರಾ.ಸೌ.ಸಂ.ಸ.ನಿ., ಬೆಂಗಳೂರು.**

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮಾನ್ಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು, ಯುವಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಯಶಸ್ಸಿಗೆ ಸಹಕರಿಸಲು ಕೋರಿದರು, ಸಹಕಾರಿ ಜಾಥಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅಗತ್ಯ ಕ್ರಮವಿಡಲು ಹಾಗೂ ಶಾಲಾ ಕಾಲೇಜುಗಳಲ್ಲಿ ಸಹಕಾರ ಕುರಿತು ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ ಐತಿಹಾಸಿಕ ಕಾರ್ಯಕ್ರಮವಾಗಬೇಕು ಎಂದು ತಿಳಿಸಿದರು.

ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ, ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ, ಶ್ರೀ ಎಂ ಆರ್ ಪ್ರಭುದೇವ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಉಪಸ್ಥಿತರಿದ್ದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕಲ್ಲಪ್ಪ ಓಬಣ್ಣಗೋಳ, ಮಾನ್ಯ ಸಹಕಾರ ಸಂಘಗಳ ಜಂಟಿ ನಿರ್ದೇಶಕರು, ಕಾನೂನು ಕೋಶ, ಸಹಕಾರ ಸಂಘಗಳ ನಿಬಂಧಕರ ಕಚೇರಿ, ಬೆಂಗಳೂರು, ಶ್ರೀ ಸುರೇಶ್‌ಗೌಡ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ, ಬೆಳಗಾವಿ ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಮತ್ತು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಬೆಳಗಾವಿ ಪ್ರಾಂತೀಯ ಕಚೇರಿಯ ಮಹಿಳಾ ಸಿಬ್ಬಂದಿಗಳಾದ ಶ್ರೀಮತಿ ಮಲ್ಲಮ್ಮಾ ದೇಗಾಂವ, ಕು. ವಿಜಯಲಕ್ಷ್ಮೀರವರು ಪ್ರಾರ್ಥನೆಯನ್ನು ನೆರವೇರಿಸಿದರು.

ಅತಿಥಿ ಗಣ್ಯರನ್ನು ಬೆಳಗಾವಿಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಬಸವರಾಜ ಹೊಂಗಲ ಇವರು ಸ್ವಾಗತ ಕೋರಿದರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ ಪಾಟೀಲರವರು ಸಹಕಾರ ಸಪ್ತಾಹದ ಧ್ಯೇಯೋದ್ದೇಶಗಳನ್ನು ಮತ್ತು ಆಚರಣೆ ಕುರಿತು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಸಭೆಯ ವಂದನಾರ್ಪಣೆಯನ್ನು ಶ್ರೀಮತಿ ಬಿ.ವಿ ಶೈಲಾ, ಪ್ರಾಂಶುಪಾಲರು ಕೆ.ಐ.ಸಿ. ಎಂ ಬೆಳಗಾವಿ ಹಾಗೂ ಸಭೆಯ ನಿರೂಪಣೆಯನ್ನು ಶ್ರೀಮತಿ ಅಶ್ವಿನಿ ಕಮ್ಮಾರವರು ನೇರವೇರಿಸಿದರು. ಈ ಸಭೆಯಲ್ಲಿ 48 ಸೌಹಾರ್ದ ಸಹಕಾರಿ/ಸಹಕಾರ ಸಂಘಗಳಿಂದ 61 ಜನ ಬೆಳಗಾವಿ ಜಿಲ್ಲೆಯ ಪ್ರಮುಖ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳೂ ಸಹ ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಮಾನ್ಯ ಸಹಕಾರಿ ಸಚಿವರಾದ ಶ್ರೀ ಕೆ.ಎನ್ ರಾಜಣ್ಣರವರು, ಮಾನ್ಯ ಜಿಲ್ಲಾ ಉಸ್ತುವಾರಿ ಹಾಗೂ ಮಾನ್ಯ ಲೋಕೊಪಯೋಗಿ ಇಲಾಖೆ ಸಚಿವರಾದ ಶ್ರೀ ಸತೀಶ ಜಾರಕಿಹೊಳಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರರವರು, ಮಾನ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಬಾಲಚಂದ್ರ ಜಾರಕಿಹೊಳಿರವರು ಹಾಗೂ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಜಿ. ಟಿ ದೇವೆಗೌಡರವರು ಮತ್ತು ಮುಂತಾದ ಗಣ್ಯರು ಹಾಗೂ ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು, ಬೆಳಗಾವಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿ/ಸಹಕಾರ ಸಂಘಗಳಿಂದ 4000ಕ್ಕೂ ಹೆಚ್ಚು ಜನ ಈ ಕಾರ್ಯಕ್ರಮಕ್ಕೆ ಭಾಗವಹಿಸಲಿದ್ದಾರೆ.

ಕಾರ್ಯಕ್ರಮವು ಸಹಕಾರಿ ಧ್ವಜಾರೋಹಣ, ಸಹಕಾರಿ ಜಾಥಾ, ಸಹಕಾರಿ ವಸ್ತು ಪ್ರದರ್ಶನ, ಆ ದಿನದ ವಿಷಯದ ಕುರಿತು ಉಪನ್ಯಾಸ ಹಾಗೂ ಸಭಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಭಾ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳಿಂದ ಉತ್ತಮ ಸಹಕಾರಿ ಸಂಸ್ಥೆಗಳನ್ನು ಆಯ್ಕೆ ಮಾಡಿ ಸನ್ಮಾನ ಮಾಡಲಾಗುವುದು.



## ಸಹಕಾರ ಸಂಘಗಳ ನಿಬಂಧಕರ ನೇತೃತ್ವದಲ್ಲಿ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ

**ಬೆಂಗಳೂರು** : ದಿನಾಂಕ 28.10.2024 ರಂದು ಮಾನ್ಯ ಸಹಕಾರ ಇಲಾಖೆಯ ನಿಬಂಧಕರಾದ ಶ್ರೀ ಟಿ.ಹೆಚ್.ಎಂ. ಕುಮಾರ್ ಐ.ಎ.ಎಸ್, ಇವರ ಅಧ್ಯಕ್ಷತೆಯಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು.

## ಅಕ್ಟೋಬರ್– 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸಹಕಾರಿಗೆ ಸಮಾಪನಾಧಿಕಾರಿ ನೇಮಕ:**

ಮಯೂರಿ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಬೆಂಗಳೂರು (ಬಿಜಿಯು–0078) ಸಹಕಾರಿಗೆ ಶ್ರೀ ಶ್ರೀಧರ್ ಎಸ್., ಸಹಪ್ರಧಾನ ವ್ಯವಸ್ಥಾಪಕರು ಹಾಗೂ ಪ್ರಾಂತೀಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ. ಬೆಂಗಳೂರು ಇವರನ್ನು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ದಿನಾಂಕ 13.09.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ. ಸದರಿ ಸಮಾಪನಾಧಿಕಾರಿಯವರು ಅಧಿಕಾರ ಸ್ವೀಕಾರ ಮಾಡಿರುತ್ತಾರೆ.

**2. ಸಮಾಪನಾಧಿಕಾರಿಯ ಮಾರ್ಪಾಡು ಆದೇಶವಾಗಿರುವ ಕುರಿತು:**

ಶ್ರೀ ಶಿವಾನಂದ ಪರಿಶಿಷ್ಟ ಜಾತಿಯವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಶಂಕರಪುರ, ತಾ॥ & ಜಿ॥ ಉಡುಪಿ. ಸಹಕಾರಿಗೆ ಈ ಹಿಂದೆ ದಿನಾಂಕ 18.08.2016ರಂದು ಸಹಕಾರಿಯ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಸುದೀರ್ ಕುಮಾರ್ ಜೆ., ಸಹಕಾರ ಅಭಿವೃದ್ಧಿ ಅಧಿಕಾರಿ, ಉಡುಪಿ ಇವರನ್ನು ನೇಮಕ ಮಾಡಲಾಗಿತ್ತು. ಸದರಿಯವರು ಪದೋನ್ನತಿಗೊಂಡು ಮತ್ತೊಂದು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿಯವರ ಬದಲಾಗಿ ಶ್ರೀ ವಿಜಯ್ ಬಿ.ಎಸ್., ಉಡುಪಿ ಜಿಲ್ಲಾ ಅಭಿವೃದ್ಧಿ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ನೇಮಕ ಮಾಡಿ ಮಾಡಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಉಪ–ವಿಭಾಗ, ಕುಂದಾಪೂರ ಇವರು ದಿನಾಂಕ 15.10.2024ರಂದು ಆದೇಶ ಮಾಡಿರುತ್ತಾರೆ.

**3. ವಿಶೇಷಾಧಿಕಾರಿಯಿಂದ ಸಹಕಾರಿಯ ನೂತನ ಆಡಳಿತ ಮಂಡಲಿಗೆ ಅಧಿಕಾರ ಹಸ್ತಾಂತರ:**

ಅ. ಶ್ರೀ ಸ್ವರೂಪ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು (ಬಿಜಿಯು–0322) ಈ ಸಹಕಾರಿಯ ವಿಶೇಷಾಧಿಕಾರಿಯಾದ ಶ್ರೀ ಅನಿಲ್ ಕುಮಾರ್ ಎಸ್., ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಪ್ರಾಂತೀಯ ಕಛೇರಿ, ಬೆಂಗಳೂರು ಇವರು ಸಹಕಾರಿಯ ನೂತನ ಆಡಳಿತ ಮಂಡಲಿಗೆ ವಿಶೇಷಾಧಿಕಾರಿಯ ಅಧಿಕಾರ ಹಸ್ತಾಂತರ ಮಾಡಿರುತ್ತಾರೆ.

ಆ. ಶ್ರೀ ಬಾಲಾಜಿ ಸೌಹಾರ್ದ ಸಹಕಾರಿ ನಿ., ಗುಡೂರು, ತಾ॥ ಇಲಕಲ್, (ಬಿಜಿಕೆ–0048) ಈ ಸಹಕಾರಿಯ ವಿಶೇಷಾಧಿಕಾರಿಯಾದ ಶ್ರೀಮತಿ ರೇಷ್ಮಾ ಪಾಟೀಲ್, ಸಹಾಯಕರು, ಕ.ರಾ.ಸೌ.ಸಂ.ಸ.ನಿ., ಪ್ರಾಂತೀಯ ಕಛೇರಿ, ಬೆಳಗಾವಿ. ಇವರು ಸಹಕಾರಿಯ ನೂತನ ಆಡಳಿತ ಮಂಡಲಿಗೆ ವಿಶೇಷಾಧಿಕಾರಿಯ ಅಧಿಕಾರ ಹಸ್ತಾಂತರ ಮಾಡಿರುತ್ತಾರೆ.

ಇ. ಶ್ರೀ ಶರಣ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೂಡ್ಲಿಗಿ (ವಿಜೆಎನ್–0051) ಈ ಸಹಕಾರಿಯ ವಿಶೇಷಾಧಿಕಾರಿಯಾದ ಶ್ರೀ ರವಿಕುಮಾರ್, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಪ್ರಾಂತೀಯ ಕಛೇರಿ, ಕಲಬುರಗಿ ಇವರು ಸಹಕಾರಿಯ ನೂತನ ಆಡಳಿತ ಮಂಡಲಿಗೆ ವಿಶೇಷಾಧಿಕಾರಿಯ ಅಧಿಕಾರ ಹಸ್ತಾಂತರ ಮಾಡಿರುತ್ತಾರೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 12.11.2024 ಯುವಕರು ಮತ್ತು ಸಹಕಾರ ಸಂವಾದ ಕಾರ್ಯಕ್ರಮವನ್ನು ಚಾಣುಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಗ್ರಾಮಾಂತರ, ದೇವನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 02.12.2024 ರಿಂದ 11.12.2024ರ ವರೆಗೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಯನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, (ಆರ್.ಐ.ಸಿ.ಎಂ) ಪದ್ಮನಾಭನಗರ, ಬೆಂಗಳೂರೂ ಇಲ್ಲಿ ಹಮ್ಮಿಕೊಳ್ಳಲಾಗಿದೆ.
3. ದಿನಾಂಕ 20.11.2024 ರಂದು 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ, ಬೆಳಗಾವಿ.

## ಸೌಹಾರ್ದ ಸಹಕಾರಿಗಳಿಗೆ CSC ಕೇಂದ್ರಗಳು ಪ್ರಾರಂಭಿಸಬೇಕೆ ?

ಸಾಮಾನ್ಯ ಸೇವಾ ಕೇಂದ್ರಗಳನ್ನು (CSC) ಪ್ರಾರಂಭಿಸಲು ಇಚ್ಛಿಸುವ ಸೌಹಾರ್ದ ಸಹಕಾರಿಗಳು ತಮ್ಮ ಆಡಳಿತ ಮಂಡಳಿ ಸಭೆಯಲ್ಲಿ ಅನುಮೊದನೆ ಪಡೆದು ಸಂಯುಕ್ತ ಸಹಕಾರಿಯ ಇ–ಮೇಲ್ ಐಡಿ kssfcltrg@souharda.coop ಗೆ ಮನವಿಯನ್ನು ಸಲ್ಲಿಸಬಹುದಾಗಿದೆ.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ವಿವರ

| ದಿನಾಂಕ | ವಿಷಯ | ನೇತೃತ್ವ | ಸ್ಥಳ |
|---|---|---|---|
| 14.11.2024 | ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳುವಳಿಯನ್ನು ಬಲಪಡಿಸುವುದು / Strengthening Cooperation Movement through New Initiatives of Ministry of Cooperation. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು. | ಬೆಂಗಳೂರು |
| 15.11.2024 | ಸಹಕಾರ ಸಂಸ್ಥೆಗಳಲ್ಲಿ ಅನ್ವೇಷಣೆ, ತಾಂತ್ರಿಕತೆ ಮತ್ತು ಉತ್ತಮ ಆಡಳಿತ / Innovation, Technology and Good Governance in Cooperatives. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಮತ್ತು ಕೆ.ಸಿ.ಸಿ ಬ್ಯಾಂಕ್ ಧಾರವಾಡ | ಚಿತ್ರದುರ್ಗ |
| 16.11.2024 | ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ / The Role of Cooperatives in Fostering Entrepreneurship, Employment, and Skill Development. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ | ಮಂಗಳೂರು |
| 17.11.2024 | ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ / Transforming Cooperative Enterprises. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಮತ್ತು ಬಾಗಲಕೋಟೆ ಡಿಸಿಸಿ ಬ್ಯಾಂಕ್ | ಬಾಗಲಕೋಟೆ |
| 18.11.2024 | ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು / Strengthening Cooperation Among Cooperatives. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿ., | ಬೀದರ |
| 19.11.2024 | ಮಹಿಳೆಯರು, ಯುವಕರು ಮತ್ತು ಅಬಲವರ್ಗಗಳಿಗಾಗಿ ಸಹಕಾರ ಸಂಸ್ಥೆಗಳು / Cooperatives for Women, Youth and Weaker Sections | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಹಾಗೂ ಡಿಸಿಸಿ ಬ್ಯಾಂಕ್ ನಿ., ಚಿಕ್ಕಮಗಳೂರು. | ಚಿಕ್ಕಮಗಳೂರು |
| 20.11.2024 | ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಘಗಳ ಪಾತ್ರ / Role of Cooperatives in Achieving SDGs and way forward for Better World. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ ನಿ., ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು ಮತ್ತು ಸಹಕಾರ ಇಲಾಖೆ | ಬೆಳಗಾವಿ |

## ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ್ ರವರಿಗೆ ಆಹ್ವಾನ



**ಬೆಂಗಳೂರು** : ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋಆಪರೇಶನ್ (ISSC), ಪುಣೆ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (KSRD-PRU), ಗದಗ ಇವರ ಸಹಯೋಗದೊಂದಿಗೆ ವೈಕುಂಠ್ ಮೇಹತಾ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕೋಆಪರೇಟಿವ್ ಮ್ಯಾನೇಜ್ಮೆಂಟ್, ಪುಣೆ ಇವರೊಂದಿಗೆ 39ನೇ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮ್ಮೇಳನವನ್ನು ದಿನಾಂಕ 13 ಹಾಗೂ 14ನೇ ಡಿಸೆಂಬರ್ 2024ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (KSRD-PRU), ಗದಗ ಇಲ್ಲಿ ಜರುಗಲಿರುವ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಲು ಶ್ರೀ ಹೆಚ್. ಕೆ. ಪಾಟೀಲ್ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ. ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮನವಿ ಮಾಡಿದರು, ಸದರಿ ಮನವಿಯನ್ನು ಮಾನ್ಯ ಸಚಿವರು ಒಪ್ಪಿರುತ್ತಾರೆ. ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ಆರ್. ದೇಶಪಾಂಡೆ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಉಪಸ್ಥಿತರಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಪ್ಪಳ** : ದಿನಾಂಕ 01.10.2024 ರಂದು ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಯಲಬುರ್ಗಾ ಮತ್ತು ಕುಕನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಗಂಗಾ ಯಮುನಾ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಯಶವಂತಕುಮಾರ, ಡಿವೈಎಸ್‌ಪಿ, ಪೋಲಿಸ್ ಸ್ಟೇಶನ್, ಕೊಪ್ಪಳ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಉಪಾಧ್ಯಕ್ಷರಾದ ಶ್ರೀ ಮಹಾಲಿಂಗಪ್ಪಾ ಧೋತಿಹಾಳ ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಶಂಕರಗೌಡ ಹಿರೇಗೌಡ, ಶ್ರೀ ಗವಿಸಿದ್ದಯ್ಯ ಲಿಂಗನಬಸಯ್ಯಮಠ, ಶ್ರೀ ಮುದ್ದಪ್ಪ ಬೇವಿನಹಳ್ಳಿ, ಶ್ರೀ ನಾಗರಾಜ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು. ಮೊದಲನೆಯ ಅವಧಿಯಲ್ಲಿ ಶ್ರೀ ಯಶವಂತಕುಮಾರ ಎಸ್.ಬಿ. ಮಾನ್ಯ ಡಿವೈಎಸ್‌ಪಿ, ಪೋಲಿಸ ಸ್ಟೇಶನ ಕೊಪ್ಪಳ ಇವರು ಸೈಬರ್ ಕ್ರೈಂನ ಕುರಿತು ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಡಿಜಿಟಲ್ ಬ್ಯಾಂಕಿಂಗ್ ಹಾಗೂ ಸೈಬರ್ ಕ್ರೈಂ ತಡೆಗಟ್ಟುವ ಕುರಿತು ಶ್ರೀ ಡಾ|| ಸಾತ್ವಿಕ, ಮಾನ್ಯ ಉಪನ್ಯಾಸಕರು, ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ, ಗದಗ ರವರು ಮಾಹಿತಿ ನೀಡಿದರು. ನಂತರ ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು ಸಾಮಾನ್ಯ ಸಭೆ ಜರುಗಿದ ನಂತರ ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ಮಾಹಿತಿ ನೀಡಿದರು. ನಾಲ್ಕನೆಯ ಅವಧಿಯಲ್ಲಿ ದಾವಾ ದಾಖಲಾತಿ ಸಲ್ಲಿಸುವ ಕುರಿತು ಮತ್ತು ಅಮಲ್ಜಾರಿ ಪ್ರಕ್ರೀಯೇಗಳ ಕುರಿತು ದಾವಾ ಪಂಚಾಯತಿ ನ್ಯಾಯಾಲಯ ಅಧಿಕಾರಿಗಳಾದ ಶ್ರೀ ಚಂದ್ರಶೇಖರಯ್ಯ ಮತ್ತು ನವೀನ ರವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 118 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಉಪಸ್ಥಿತರಿದ್ದರು.

# ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಶಿವಮೊಗ್ಗ** : ದಿನಾಂಕ 10-10-2024ರಂದು ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆಯನ್ನು ಮಿಥಿಲಾ ಮನೆಯ ಮೊದಲನೆ ಮಹಡಿ, ಎನ್‌ಟಿ ರಸ್ತೆ, 2ನೇ ತಿರುವು, ಜಿಎಸ್‌ಕೆಎಂ ರಸ್ತೆ, ಶಿವಮೊಗ್ಗ ಹಾಗೂ ವಿಷಯಾಧಾರಿತ ತರಬೇತಿಯನ್ನು ಜ್ಯುಯಲ್ ರಾಕ್ ಹೋಟೆಲ್, ಜೆಪಿಎನ್ ರಸ್ತೆ, ದುರ್ಗಿಗುಡಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಕಛೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು.. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಯುತ ಚನ್ನಬಸಪ್ಪ, ಮಾನ್ಯ ಶಾಸಕರು, ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಆರ್‌ಎಸ್‌ಎಸ್‌ನ ಹಿರಿಯರಾದ ಶ್ರೀ ಪಟ್ಟಾಭಿರಾಮ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು, ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸುರೇಶ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 58 ಸಹಕಾರಿಗಳಿಂದ 105 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ 24.10.2024ರಂದು ಅಪೂರ್ವ ರೆಸ್ಟೋರೆಂಟ್ ಸಭಾಂಗಣ, ದಾವಣಗೆರೆ ಇಲ್ಲಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್. ಎಮ್. ನಾಗರಾಜುರವರು, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ. ರವೀಂದ್ರನಾಥ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ನಡೆಸಿಕೊಟ್ಟರು. 46 ಸೌಹಾರ್ದ ಸಹಕಾರಿಗಳಿಂದ 82 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿತ್ರದುರ್ಗ** : ದಿನಾಂಕ 25.10.2024ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ಲಿ,. ಜೆ. ಸಿ. ಆರ್ ಬಡಾವಣೆ ಶಾಖೆ, ಚಿತ್ರದುರ್ಗ ಇಲ್ಲಿ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೀರೇಂದ್ರ ಬಾಬು ರವರು, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ನಡೆಸಿಕೊಟ್ಟರು. 37 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.

## ಪ್ರವೇಶ ತರಬೇತಿ ಕಾರ್ಯಕ್ರಮ




**ಚಾಮರಾಜನಗರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ನೂತನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳು ಹಾಗೂ ಇತರ ಸಿಬ್ಬಂದಿಗಳಿಗಾಗಿ 2 ದಿನಗಳ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ದಿನಾಂಕ 22.10.2024 ರಂದು "ಶ್ರೀ ಸಾಲೂರು ಸ್ವಾಮಿ ಸ್ಮಾರಕ ಭವನ" ಸಾಲೂರು ಮಠದ ರಸ್ತೆ, ಮಲೆ ಮಹದೇಶ್ವರ ಬೆಟ್ಟ, ತಾ: ಹನೂರು ಜಿ: ಚಾಮರಾಜನಗರ ಇಲ್ಲಿ 2 ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪೊನ್ನಾಚಿ ಸ್ವಾಮಿಗಳು, ಸಾಲೂರು ಮಠ, ಇವರು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್.ಕೆ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಸದರಿ ಕಾರ್ಯಾಗಾರದಲ್ಲಿ ಶ್ರೀ ನಾರಾಯಣರಾವ್, ಅಧ್ಯಕ್ಷರು, ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಶ್ರೀ ಗುರುರಾಜ್ ಬಿ. ಟಿ, ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರುಗಳು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 28 ಸೌಹಾರ್ದ ಸಹಕಾರಿಗಳಿಂದ 62 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## "ಇ-ಸ್ಟಾಂಪಿಂಗ್ ಎ.ಸಿ.ಸಿ. ಕೇಂದ್ರಗಳ ಕಾರ್ಯನಿರ್ವಹಣೆ ಹಾಗೂ ಸಹಕಾರಿಯಲ್ಲಿ ಆನ್‌ಲೈನ್ ಸೇವೆಗಳ ಅವಕಾಶಗಳ ಕುರಿತು" ತರಬೇತಿ

**ಮೈಸೂರು ಪ್ರಾಂತ :** ದಿನಾಂಕ 08.10.2024 ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ಪ್ರಾಂತದ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು, ಇ–ಸ್ಟಾಂಪಿಂಗ್ ಎ.ಸಿ.ಸಿ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳಿಗಾಗಿ ಅನ್‌ಲೈನ್ ಮೂಲಕ "ಇ–ಸ್ಟಾಂಪಿಂಗ್ ಎ.ಸಿ.ಸಿ. ಕೇಂದ್ರಗಳ ಕಾರ್ಯನಿರ್ವಹಣೆ ಹಾಗೂ ಸಹಕಾರಿಯಲ್ಲಿ ಆನ್ ಲೈನ್ ಸೇವೆಗಳ ಅವಕಾಶಗಳ ಕುರಿತು" ಎಂಬ ವಿಷಯದ ಕುರಿತು ಆನ್ ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ. ಜಿ. ಭಟ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಾಜೇಂದ್ರ ಸಿಂಧೆ, ವ್ಯವಸ್ಥಾಪಕರು, ಸೇವಾ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು "ಇ–ಸ್ಟಾಂಪಿಂಗ್ ಎ.ಸಿ.ಸಿ. ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು" ಉಪನ್ಯಾಸ ನೀಡಿದರು ಹಾಗೂ "ಸಹಕಾರಿಯಲ್ಲಿ ಆನ್‌ಲೈನ್ ಸೇವೆಗಳ ಅವಕಾಶಗಳ ಕುರಿತು" ಶ್ರೀ ಹೇಮಚಂದ್ರ, ಮುಖ್ಯಕಾರ್ಯನಿರ್ವಾಹಕರು, ಸ್ವಸ್ತಿಕ್ ಸೌಹಾರ್ದ ಸಹಕಾರಿ ನಿ., ಇವರು ಹಾಗೂ ಶ್ರೀಮತಿ ಸರೋಜ ಎಸ್, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇದರ ಸಿಬ್ಬಂದಿ ಇವರು ಉಪನ್ಯಾಸ ನೀಡಿದರು.

## ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾಗಿ ಶ್ರೀ ಸುರೇಶ್ ಪಿ.ಎನ್.



**ಬೆಂಗಳೂರು :** ಬೆಂಗಳೂರು : ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾಗಿ ಶ್ರೀ ಸುರೇಶ್ ಪಿ.ಎನ್ ರವರು ದಿನಾಂಕ 30.10.3024 ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಶ್ರೀಯುತರು ಅಧಿಕಾರ ವಹಿಸಿಕೊಂಡ ನಂತರ ಸಂಯುಕ್ತ ಸಹಕಾರಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿ ಸಂತೋಷ ವ್ಯಕ್ತಪಡಿಸಿದರು ಮತ್ತು ಸಂಯುಕ್ತ ಸಹಕಾರಿ ಹಾಗೂ ಆರ್.ಐ.ಸಿ.ಎಂ ಒಟ್ಟಾಗಿ ಸಹಯೋಗದೊಂದಿಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಚರ್ಚಿಸಲಾಯಿತು. ಇದುವರೆಗೂ ಕಾರ್ಯನಿರ್ವಹಿಸಿದ ಡಾ. ಆರ್ ಇಳಂಗೋವನ್ ನವರು ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆದು ಪುಣೆಯ ವೈಕುಂಠ ಮೆಹ್ತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ವರ್ಗಾವಾಗಿದ್ದಾರೆ.

# ಕ್ಲಸ್ಟರ್ ಮಟ್ಟದ ತರಬೇತಿ

**ಯಾದಗಿರಿ :** ದಿನಾಂಕ 12.09.2024 ರಂದು ಕಲಬುರಗಿ ಪ್ರಾಂತದ ಯಾದಗಿರಿ ಜಿಲ್ಲೆಯ ಯಾದಗಿರಿ ನಗರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಶುಭನಂದಿ ಸೌಹಾರ್ದ ಸಹಕಾರಿ ನಿ., ಯಾದಗಿರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಸಾಮನ್ಯ ಸಭೆಯ ಸಿದ್ದತೆ. ಕಲಂ 34 ರ ಮಾಹಿತಿ ಮತ್ತು ಸಾಲ ವಸೂಲಾತಿಯ ಪ್ರಕ್ರೀಯೇಯ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ಒಟ್ಟು 8 ಸಹಕಾರಿಗಳಿಂದ 8 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ಬೀದರ :** ದಿನಾಂಕ 5.09.2024 ರಂದು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರ ಅಧ್ಯಕ್ಷತೆಯಲ್ಲಿ ಗುರು ನಿರಂಜನ ಸೌಹಾರ್ದ ಸಹಕಾರಿ ನಿ., ಭಾಲ್ಕಿಯಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಲೆಕ್ಕಪರಿಶೋಧನಾ ಸಾಮಾನ್ಯ ಸಭೆ, ಚುನಾವಣೆ ಮತ್ತು ಕಲಂ 34ರ ಮಾಹಿತಿ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿಯವರು ಉಪನ್ಯಾಸ ನೀಡಿದರು. ಸಭೆಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 12 ಮುಖ್ಯಕಾರ್ಯನಿರ್ವಾಹಕರು ಮತ್ತು ಇತರೇ ಸಿಬ್ಬಂದಿಗಳು ಭಾಗವಹಿಸಿದ್ದರು.

**ತುಮಕೂರು :** ದಿನಾಂಕ 01–10–2024ರಂದು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಉದಯರವಿ ಸೌಹಾರ್ದ ಸಹಕಾರಿ ಸಂಘ ನಿ, ತಿಪಟೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜಣ್ಣನವರು ಉದ್ಘಾಟಿಸಿದರು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 14 ಸೌಹಾರ್ದ ಸಹಕಾರಿಗಳಿಂದ 18 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ 03–10–2024ರಂದು ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಪತಂಜಲಿ ಸೌಹಾರ್ದ ಸಹಕಾರಿ ಸಂಘ ನಿ., ಪಾವಗಡ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಲಾಜಿ ರವರು ಉದ್ಘಾಟಿಸಿದರು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 12 ಸೌಹಾರ್ದ ಸಹಕಾರಿಗಳಿಂದ 14 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ :** ದಿನಾಂಕ 09–10–2024ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಕ್ಷಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ಗೌರಿಬಿದನೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸದರಿ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಭದ್ರಿನಾಥ್ ರವರು ನೆರವೇರಿಸಿದರು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 07 ಸೌಹಾರ್ದ ಸಹಕಾರಿಗಳಿಂದ 13 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ರಾಮನಗರ :** ದಿನಾಂಕ 09–10–2024ರಂದು ವೈಶ್ಯ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಮಾಗಡಿ ಸಹಕಾರಿಯ ಸಿಬ್ಬಂದಿ ನೇಮಕಾತಿ ಸಮಿತಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ನಿರ್ದೇಶಕರ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಹಾಗೂ ಸೌಹಾರ್ದ ಕಾಯ್ದೆಯ ಕುರಿತು ಮಾಹಿತಿ ನೀಡಿದರು.

ದಿನಾಂಕ 18.10.2024ರಂದು ದೇವರಾಜು ಅರಸು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ರಾಮನಗರ ಇಲ್ಲಿ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್ ರಾವ್ ರವರು ಭಾಗವಹಿಸಿ ಉಪವಿಧಿ ತಿದ್ದುಪಡಿ, ಆಡಳಿತ ಮಂಡಳಿ ಸಭೆ, ಈಜಿ ಪೇ ಮೂಲಕ ವಾರ್ಷಿಕ ಶುಲ್ಕ ಶಿಕ್ಷಣ ನಿಧಿ ಪಾವತಿ, ಸಹಕಾರಿಗಳ ಚುನಾವಣೆ, ಕಲಂ–34ರ ಮಾಹಿತಿ ಸಲ್ಲಿಕೆ ಹಾಗೂ ಸಂಯುಕ್ತ ಸಹಕಾ–ರಿಯು ಪ್ರಾರಂಭಿಸಿರುವ ಡಿಸಿಬಿಎಂ ಕೋರ್ಸಿಗೆ ನೋಂದಣಿಯಾಗುವ ಕುರಿತು ಮಾಹಿತಿ ನೀಡಿದರು. 7 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯ ನಿರ್ವಾಹಕರು ಹಾಗೂ ಸಿಬ್ಬಂದಿಗಳನ್ನು ಒಳಗೊಂಡಂತೆ 13 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ :** ದಿನಾಂಕ 21.10.2024ರಂದು ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘ ನಿ., ಮಲೆಬೆನ್ನೂರು, ದಾವಣಗೆರೆ ಜಿಲ್ಲೆ ಸೌಹಾರ್ದ ಸಹಕಾರಿಯ ಸಿಬ್ಬಂದಿ ನೇಮಕಾತಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ

ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ನಿಯಮಾನುಸಾರ ಹಾಗೂ ಸಹಕಾರಿಯ ಉಪವಿಧಿಯನ್ವಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಜರುಗಿಸಿದರು. ಸಂದರ್ಶನಕ್ಕೆ 14 ಅಭ್ಯರ್ಥಿಗಳು ಹಾಜರಾಗಿದ್ದರು.

**ಬಾಗಲಕೋಟೆ:** ದಿನಾಂಕ 01.10.2024 ರಂದು ಮಧ್ಯಾಹ್ನ 2:30 ಕ್ಕೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ನವನಗರ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಎನ್ ಪಾಟೀಲ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 23 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 03.10.2024 ರಂದು ಬೆಳಿಗ್ಗೆ 10:30 ಕ್ಕೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮುಧೋಳ ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ನಿ., ಮುಧೋಳ ಜಿ: ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 36 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ವಿಜಯಪುರ:** ದಿನಾಂಕ 08.10.2024 ರಂದು ವಿಜಯಪುರ ಜಿಲ್ಲೆಯ ಸಿಂದಗಿ, ದೇವರ ಹಿಪ್ಪರಗಿ ಹಾಗೂ ಆಲಮೇಲ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಚೌಡೇಶ್ವರ ಕಲ್ಯಾಣ ಮಂಟಪ ಸಿಂದಗಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಶ್ರೀ ಕೆ.ಹೆಚ್. ವಡ್ಡರ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇಂಡಿ ಇವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಜಿ.ಸಿ. ಸಂಗಾಲಕ ಮಾನ್ಯ ಅಧ್ಯಕ್ಷರು ಗುರುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಸಿಂದಗಿ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿಸಭೆ ಜರುಗಿಸುವ ಕುರಿತು, ಮುಖ್ಯಕಾರ್ಯನಿರ್ವಾಹಕರ ಮತ್ತು ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್. ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 37 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 15.10.2024 ರಂದು ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಶ್ರೀ ಗುರುಕುಮಾರೇಶ್ವರ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಗುಣದಾಳ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿಸಭೆ ಜರುಗಿಸುವ ಕುರಿತು, ಶಾಸನಬದ್ದ ಪಾವತಿಗಳ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಶ್ರೀಮತಿ ಪ್ರತಿಭಾ ಮಠ, ಸಹಾಯಕಿ ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 08 ಪ್ರತಿನಿಧಿಗಳು ಹಾಜರಾಗಿದ್ದರು.

**ಬೆಳಗಾವಿ:** ದಿನಾಂಕ 15.10.2024 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಾಗೂ ಹುಕ್ಕೇರಿ ತಾಲೂಕಿನ ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಶ್ರೀ ಮಹಾವೀರ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಅರ್ಜುನ ವಾಡ ರಸ್ತೆ, ಹುಕ್ಕೇರಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಕಲಂ 34 ರ ಅನ್ವಯ ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಸುವ ಕುರಿತು, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ನಡೆಸುವ ವಿಧಾನಗಳ ಕುರಿತು, ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಿವಕಾಂತ ಎನ್ ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 43 ಸೌಹಾರ್ದ ಸಹಕಾರಿಗಳಿಂದ 51 ಪ್ರತಿನಿಧಿಗಳು ಹಾಜರಾಗಿದ್ದರು.

**ಹಾವೇರಿ:** ದಿನಾಂಕ 19.10.2024 ರಂದು ಹಾವೇರಿ ಜಿಲ್ಲೇಯ ರಾಣೆಬೆನ್ನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಣೆಬೆನ್ನೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಅನ್ವಯ ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಸುವ ಕುರಿತು, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ನಡೆಸುವ ವಿಧಾನಗಳ ಕುರಿತು, ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಮತ್ತು ಸಂಯುಕ್ತ ಸಹಕಾರಿಗೆ ಶಾಸನಬದ್ದ ಶುಲ್ಕ ಪಾವತಿಸುವ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್.

ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 33 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 19.10.2024 ರಂದು ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ನವಚೈತನ ಸೌಹಾರ್ದ ಸಹಕಾರಿ ನಿ., ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಅನ್ವಯ ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಸುವ ಕುರಿತು, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ನಡೆಸುವ ವಿಧಾನಗಳ ಕುರಿತು, ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ಮತ್ತು ಸಂಯುಕ್ತ ಸಹಕಾರಿಗೆ ಶಾಸನಬದ್ದ ಶುಲ್ಕ ಪಾವತಿಸುವ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಕಲ್ಮೇಶ ಎಮ್. ಇವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 21 ಪ್ರತಿನಿಧಿಗಳು ಹಾಜರಾಗಿದ್ದರು.

**ಮಂಡ್ಯ :** ದಿನಾಂಕ 16.10.2024 ಮಂಡ್ಯ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ವಿವಿ ರಸ್ತೆ, ಮಂಡ್ಯ ಇಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ತರಬೇತಿ ಕಾರ್ಯಗಾರದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಸುತ್ತೋಲೆಯ ವಿಷಯದ ಬಗ್ಗೆ ತರಬೇತಿಯನ್ನು ಆಯೋಜಿಸಲಾಗಿದ್ದು ಈ ವಿಷಯದ ಬಗ್ಗೆ ಶ್ರೀ ಗುರುಪ್ರಸಾದ್ ಬಂಗೇರ ಪ್ರಾಂತೀಯ ಅಧಿಕಾರಿಗಳು ಮೈಸೂರು ಇವರು ಉಪನ್ಯಾಸವನ್ನು ನೀಡಿದರು.

ಈ ಕಾರ್ಯದ ಅಧ್ಯಕ್ಷತೆಯನ್ನು ಶ್ರೀ ಗುರುರಾಜ್, ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ದಲಿಂಗಯ್ಯ, ಉಪಾಧ್ಯಕ್ಷರು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ಉಪಸ್ಥಿತ–ರಿದ್ದರು. ಒಟ್ಟು 21 ಸೌಹಾರ್ದ ಸಹಕಾರಿಗಳಿಂದ 24 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಮೈಸೂರು :** ದಿನಾಂಕ 17.10.2024ರಂದು ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಪ್ರಾಂತೀಯ ಕಚೇರಿಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಈ ತರಬೇತಿ ಕಾರ್ಯಕ್ರಮದಲ್ಲಿ ಸಹಕಾರಿಯ ಹಣ–ಕಾಸು ನಿರ್ವಹಣೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಪಾತ್ರ ವಿಷಯದ ಬಗ್ಗೆ ಒಕ್ಕೂಟದ ಅಧ್ಯಕ್ಷರಾದ ನಾರಾಯಣರಾವ್ ರವರು ಹಾಗೂ ಸಹಕಾರಿಯಲ್ಲಿ ದಾಖಲಾತಿ ನಿರ್ವಹಣೆ ಕುರಿತು ಮೈಸೂರು ಕೊಡಗು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಭಗೀರಥ ರವರು ಉಪನ್ಯಾಸ ನೀಡಿದರು ಕಾರ್ಯಕ್ರಮದಲ್ಲಿ ಒಟ್ಟು 28 ಸೌಹಾರ್ದ ಸಹಕಾರಿಗಳಿಂದ 31 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಿರುಗುಪ್ಪ ಮತ್ತು ಕುರುಗೋಡು :** ದಿನಾಂಕ 15.10.2024 ರಂದು ಸಿರುಗುಪ್ಪ ಮತ್ತು ಕುರುಗೋಡು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿಷ್ಣು ವಿಲಾಸ ಸೌಹಾರ್ದ ಸಹಕಾರಿ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿದ್ದರು. ಸಭೆಯನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರರವರು ನಡೆಸಿಕೊಟ್ಟರು.

ಸಭೆಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ, ಸಾಮಾನ್ಯ ಸಭೆ ಜರುಗಿಸುವ ವಿಧಾನ, ಚುನಾವಣಾ ಪ್ರಸ್ತಾವನೆ ಸಲ್ಲಿಸುವ ಕುರಿತು, ಕಲಂ 34 ಮಾಹಿತಿ ಸಲ್ಲಿಕೆಯ, ಲೆಕ್ಕಪರಿಶೋಧಕರ ನೇಮಕಾತಿಯ ವಿಧಾನದ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಶಾಸನಬದ್ಧ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಪಾವತಿಯ ಬಗ್ಗೆ ಮಾಹಿತಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಸಭೆಯಲ್ಲಿ 22 ಸಹಕಾರಿಗಳಿಂದ 26 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.10.2024 ರಂದು ಬೆಳಿಗ್ಗೆ ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಂಜಯ್ ಗಾಂಧಿ ಪಾಲಿಟೆಕ್ನಿಕ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿದ್ದರು. ಸಭೆಯನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರರವರು ನಡೆಸಿಕೊಟ್ಟರು.

ಸಭೆಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ, ಸಾಮಾನ್ಯ ಸಭೆ ಜರುಗಿಸುವ ವಿಧಾನ, ಚುನಾವಣಾ ಪ್ರಸ್ತಾವನೆ ಸಲ್ಲಿಸುವ ಕುರಿತು, ಕಲಂ 34 ಮಾಹಿತಿ ಸಲ್ಲಿಕೆಯ, ಲೆಕ್ಕಪರಿಶೋಧಕರ ನೇಮಕಾತಿಯ ವಿಧಾನದ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಶಾಸನಬದ್ಧ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಪಾವತಿಯ ಬಗ್ಗೆ ಮಾಹಿತಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಸಭೆಯಲ್ಲಿ 44 ಸಹಕಾರಿಗಳಿಂದ 31 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.10.2024 ರಂದು ಬೆಳಿಗ್ಗೆ ಬಳ್ಳಾರಿ ಜಿಲ್ಲೆಯ ಕಂಪ್ಲಿ ಮತ್ತು ಸಂಡೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿಲ್ಲಾ

ಯುನಿಯನ್ ಸಭಾಂಗಣ, ಬಲ್ಡೋಟ್ ಪಾರ್ಕ್, ಸಹಕಾರಿಗಳ ಸಂಘಗಳ ನಿಬಂಧಕರ ಕಛೇರಿಯ ಮೇಲ್ಭಾಗ ಹೊಸಪೇಟೆ ಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿದ್ದರು. ಸಭೆಯನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರರವರು ನಡೆಸಿಕೊಟ್ಟರು. ಸಭೆಯಲ್ಲಿ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ, ಸಾಮಾನ್ಯ ಸಭೆ ಜರುಗಿಸುವ ವಿಧಾನ, ಚುನಾವಣಾ ಪ್ರಸ್ತಾವನೆ ಸಲ್ಲಿಸುವ ಕುರಿತು, ಕಲಂ 34 ಮಾಹಿತಿ ಸಲ್ಲಿಕೆಯ, ಲೆಕ್ಕಪರಿಶೋಧಕರ ನೇಮಕಾತಿಯ ವಿಧಾನದ ಕುರಿತು ಹಾಗೂ ಸಂಯುಕ್ತ ಸಹಕಾರಿಯ ಶಾಸನಬದ್ಧ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಪಾವತಿಯ ಬಗ್ಗೆ ಮಾಹಿತಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಸಭೆಯಲ್ಲಿ 07 ಸಹಕಾರಿಗಳಿಂದ 12 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟೆ :** ದಿನಾಂಕ : 22–10–2024 ಮಂಗಳವಾರ. ಸಮಯ: ಮುಂಜಾನೆ 10.30 ರಿಂದ 1.00 ಗಂಟೆಯವರೆಗೆ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸ್ವಾಮಿ ವಿವೇಕಾನಂದ ಸೌಹಾರ್ದ ಸಹಕಾರಿ ಸಂಘ ನಿಯಮಿತ ಬೀಳಗಿ. ಇಲ್ಲಿ ಜರುಗಿತು. ವಿವಿಧ ಇಲಾಖೆಗಳಿಗೆ ಕಲಂ 34 ಪ್ರಕಾರ ಮಾಹಿತಿ ಸಲ್ಲಿಕೆ ಹಾಗೂ ಇತರೆ ಶಾಸನಬದ್ದ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ವಿಷಯಗಳ ಕುರಿತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ ರಾಥೋಡ ರವರು ಮಾಹಿತಿಯನ್ನು ನೀಡಿದರು. ಈ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 37 ಜನ ಭಾಗವಹಿಸಿದ್ದರು.

ದಿನಾಂಕ 23–10–2024 ಮಂಗಳವಾರ. ಸಮಯ: ಮುಂಜಾನೆ 10.30 ರಿಂದ 1.00 ಗಂಟೆಯವರೆಗೆ ಬಾಗಲಕೋಟೆ ಜಿಲ್ಲೆಯ ತೇರದಾಳ ಮತ್ತು ರಬಕವಿ–ಬನಹಟ್ಟಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಿದ್ದು ಸವದಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ತೇರದಾಳ ಶಾಖೆ, ತೇರದಾಳ ಇಲ್ಲಿ ಆಯೋಜಿಸಲಾಗಿದೆ. ವಿವಿಧ ಇಲಾಖೆಗಳಿಗೆ ಕಲಂ 34 ಪ್ರಕಾರ ಮಾಹಿತಿ ಸಲ್ಲಿಕೆ ಹಾಗೂ ಇತರೆ ಶಾಸನಬದ್ದ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ವಿಷಯಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ ರಾಥೋಡ ರವರು ಮಾಹಿತಿಯನ್ನು ನೀಡಿದರು. ಈ ತರಬೇತಿಯಲ್ಲಿ 57 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 66 ಜನ ಭಾಗವಹಿಸಿದ್ದರು.

**ವಿಜಯಪುರ :** ದಿನಾಂಕ 23–10–2024 ಬುಧವಾರದಂದು ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ದಾನೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಚಡಚಣ. ಇಲ್ಲಿ ಆಯೋಜನೆ ಮಾಡಲಾಗಿದೆ. ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆಯ ಕುರಿತು, ಸಹಕಾರಿಯಲ್ಲಿ ದಾಖಲಾತಿಗಳ ನಿರ್ವಹಣೆ ಕುರಿತು, ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಮಾಹಿತಿ ನೀಡಿದರು. ಕಲಂ 34ರ ಮಾಹಿತಿ ಸಲ್ಲಿಕೆ ಹಾಗೂ ಆಡಳಿತ ಮಂಡಳಿ ಚುನಾವಣೆ ಕುರಿತು ಪ್ರತಿಭಾ ಮಠ ಇವರು ಹೇಳಿದರು. ಈ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 24 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ :** ದಿನಾಂಕ 24–10–2024 ಗುರುವಾರದಂದು ಬೆಳಗಾವಿ ಜಿಲ್ಲೆಯ ಬೆಳಗಾವಿ ಹಾಗೂ ಖಾನಾಪೂರ ತಾಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ದಾವಾ ದಾಖಲಾತಿ ಮತ್ತು ಕಲಂ 34 ಅಡಿ ಮಾಹಿತಿ ಸಲ್ಲಿಕೆ ಕುರಿತು ಅಧಿಕಾರಿಗಳಾದ ಶ್ರೀ ಗಂಗಾರಾಂ ಕೋಳಾಪ್ಪೆ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 18 ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ :** ದಿನಾಂಕ 24–10–2024 ಗುರುವಾರದಂದು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಶ್ರೀ ಶಾಂತೇಶ್ವರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇಂಡಿ ಇಲ್ಲಿ ಆಯೋಜನೆ ಮಾಡಲಾಗಿದೆ. ತರಬೇತಿಯಲ್ಲಿ ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆಯ ಕುರಿತು, ಸಹಕಾರಿಯಲ್ಲಿ ದಾಖಲಾತಿಗಳ ನಿರ್ವಹಣೆ ಕುರಿತು, ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಮಾಹಿತಿ ನೀಡಿದರು. ಕಲಂ 34ರ ಮಾಹಿತಿ ಸಲ್ಲಿಕೆ ಹಾಗೂ ಆಡಳಿತ ಮಂಡಳಿ ಚುನಾವಣೆ ಕುರಿತು ಪ್ರತಿಭಾ ಮಠ ಇವರು ಹೇಳಿದರು. ಈ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 38 ಪ್ರತಿನಿಧಿಗಳು

ಭಾಗವಹಿಸಿದ್ದರು.

**ಉಡುಪಿ :** ದಿನಾಂಕ : 26.10.2024 ರಂದು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಉಡುಪಿ ನಗರದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ಬೆಳಗಿನ ಅವಧಿಯಲ್ಲಿ ಕ್ಲಸ್ಟರ್‌ಮಟ್ಟದ ತರಬೇತಿಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಉದ್ಘಾಟಿಸಿದರು. ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ, ಉಪಾಧ್ಯಕ್ಷರಾದ ಶ್ರೀ ಮಧುಸೂದನ್ ನಾಯಕ್, ನಿರ್ದೇಶಕರಾದ ಶ್ರೀ ಸುದೀಶ್ ನಾಯಕ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಳಿಯ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ಕ್ರಮಗಳು ಹಾಗೂ ವಿಷಯಗಳು, ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಸಹಕಾರಿಗಳ ಚುನಾವಣೆ ಪೂರ್ವ ಸಿದ್ಧತೆಗಳು ಹಾಗು ದಾವಾ ದಾಖಲಾತಿ ವಿಧಾನಗಳ ಕುರಿತು ಮಾಹಿತಿ ನೀಡಲಾಯಿತು. ಸದರಿ ತರಬೇತಿಗಳಿಗೆ 24 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ : 26.10.2024 ರಂದು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಉಡುಪಿ ಗ್ರಾಮಾಂತರ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್‌ಮಟ್ಟದ ತರಬೇತಿಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಉದ್ಘಾಟಿಸಿದರು. ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ,ಉಪಾಧ್ಯಕ್ಷರಾದ ಶ್ರೀ ಮಧುಸೂದನ್ ನಾಯಕ್, ನಿರ್ದೇಶಕರಾದ ಶ್ರೀ ಸುದೀಶ್ ನಾಯಕ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಳಿಯ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ಕ್ರಮಗಳು ಹಾಗು ವಿಷಯಗಳು, ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಸಹಕಾರಿಗಳ ಚುನಾವಣೆ ಪೂರ್ವ ಸಿದ್ಧತೆಗಳು ಹಾಗು ದಾವಾ ದಾಖಲಾತಿ ವಿಧಾನಗಳ ಕುರಿತು ಮಾಹಿತಿ ನೀಡಲಾಯಿತು. ಸದರಿ ತರಬೇತಿಗಳಿಗೆ 20 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 28.10.2024 ರಂದು ಬೆಳಗಿನ ಅವಧಿಯಲ್ಲಿ ಕಾರ್ಕಳ ಮತ್ತು ಹೆಬ್ರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಬಾಹುಬಲಿ ಸೌಹಾರ್ದ ಸಹಕಾರಿ ಸಂಘ ಇದರ ಆಡಳಿತ ಕಚೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ರವರು ಉದ್ಘಾಟಿಸಿದರು. ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ, ನಿರ್ದೇಶಕರಾದ ನೇಮಿರಾಜ್ ಅರಿಗಾ ಮತ್ತು ಅಡ್ವೆ ಸೌಹಾರ್ದ ಸಹಕಾರಿ ನಿ ಇದರ ಅಧ್ಯಕ್ಷರಾದ ಶ್ರೀ ನವೀನ ಚಂದ್ರ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಳಿಯ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ಕ್ರಮಗಳು ಹಾಗು ವಿಷಯಗಳು, ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಸಹಕಾರಿಗಳ ಚುನಾವಣೆ ಪೂರ್ವ ಸಿದ್ಧತೆಗಳ ಕುರಿತು ಮಾಹಿತಿ ನೀಡಲಾಯಿತು. ಸದರಿ ತರಬೇತಿಗಳಿಗೆ ಮೂರು ತಾಲ್ಲೂಕುಗಳಿಂದ 19 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 28.10.2024 ರಂದು ಮಧ್ಯಾಹ್ನದ ಅವಧಿಯಲ್ಲಿ ಕಾಪು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಅಡ್ವೆ ಸೌಹಾರ್ದ ಸಹಕಾರಿ ಸಂಘ ಇಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು. ಸದರಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಉದ್ಘಾಟಿಸಿದರು. ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ, ಉಪಸ್ಥಿತರಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಳಿಯ ಸಭೆ ಮತ್ತು ಸಾಮಾನ್ಯ ಸಭೆ ನಡೆಸುವ ಕ್ರಮಗಳು ಹಾಗೂ ವಿಷಯಗಳು, ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಸಹಕಾರಿಗಳ ಚುನಾವಣೆ ಪೂರ್ವ ಸಿದ್ಧತೆಗಳ ಕುರಿತು ಮಾಹಿತಿ ನೀಡಲಾಯಿತು. ಸದರಿ ತರಬೇತಿಗಳಿಗೆ ಮೂರು ತಾಲ್ಲೂಕುಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.



**ಜಮಖಂಡಿ :** ದಿನಾಂಕ 24.10.2024 ರಂದು ಶ್ರೀ ಪ್ರಭುಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಜಮಖಂಡಿ ಸಹಕಾರಿಯು 2023–24 ನೇ ಸಾಲಿನ ಶಿಕ್ಷಣ ನಿಧಿ ರೂಪಾಯಿ 18 ಲಕ್ಷ ಚೆಕ್ಕನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ದೇವಲ ಎ. ದೇಸಾಯಿ, ಶ್ರೀ ಬಸಯ್ಯ ಎಸ್. ಮಹಾಲಿಂಗಪೂರ ಹಾಗೂ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಮಹೇಶ ಎಸ್. ಮಠಪತಿ, ಉಪ್ರಧಾನ ವ್ಯವಸ್ಥಾಪಕರಾದ ಶ್ರೀ ಶಿವರುದ್ರಪ್ಪ ಎಸ್. ತೇಲಿ ಮತ್ತು ಸಹಾಯಕ ಪ್ರಧಾನ ವ್ಯವಸ್ಥಾಪಕರು ಹಾಗೂ ವ್ಯವಸ್ಥಾಪಕರು ಉಪಸ್ಥಿತರಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮದ ಛಾಯಾಚಿತ್ರಗಳು




ಉಡುಪಿ



ಹಾವೇರಿ



ಬಾಗಲಕೋಟ



ಮಂಡ್ಯ



ಮೈಸೂರು




ಬಳ್ಳಾರಿ



**ಗದಗ** : ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರಲ್ಲಿ ದಿನಾಂಕ 23/10/2024 ರಂದು 11-30 ಕ್ಕೆ ಸಂಘದಲ್ಲಿ ಆಫೀಸಿನಲ್ಲಿ ಭಾರತದ ಸ್ವಾತಂತ್ರ್ಯದ ಪ್ರಥಮ ಮಹಿಳಾ ಹೊರಾಟಗಾರ್ತಿ ವೀರರಾಣಿ ಕಿತ್ತೂರ ಚೆನ್ನಮ್ಮ 200ನೇ ವಿಜಯೋತ್ಸವವನ್ನು ಸಂಘದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಎಂ ಪಾಟೀಲ ನಿರ್ದೇಶಕರಾದ ಎಸ್ ಬಿ ಕಲಕೇರಿ, ಎಸ್. ಎಲ್ . ನೀಲಗುಂದ ಮತ್ತು ಸವಿತಾ ಎಂ. ಪಾಟೀಲ ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರಾದ ಶ್ರೀ ಸಿ. ವ್ಹಿ. ಪಾಟೀಲ ಮತ್ತು ಪರಪ್ಪ ವ್ಹಿ. ಬಳಿಗೇರ ಹಾಜರಿದ್ದರು.

ಸಹಕಾರಿಯ ಅಧ್ಯಕ್ಷರಾದ ಎಸ್ ಎಂ ಪಾಟೀಲ ಮಾತನಾಡಿದರು ಬ್ರಿಟಿಷರು ವಿರುದ್ಧ ಜಯಸಾಧಿಸಿದ ಬಗ್ಗೆ ವಿವರವಾಗಿ ಪ್ರತಿಯೊಬ್ಬ ನಿರ್ದೇಶಕರು ಮಾತನಾಡಿದರು. ನಂತರ ಕಾರ್ಯಕ್ರಮ ಮುಕ್ತಾಯಗೊಳಿಸಿದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಶಿವಮೊಗ್ಗ :** ದಿನಾಂಕ 10-10-2024ರಂದು ಶಿವಮೊಗ್ಗ ಜಿಲ್ಲೆಯ ಶ್ರೀ ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮತ್ತು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿ ಸಹಕಾರಿಯ ಬೆಳವಣಿಗೆಗಳ ಕುರಿತು ಸೂಕ್ತ ಸಲಹೆಗಳನ್ನು ನೀಡಿದರು.



**ಶಿವಮೊಗ್ಗ :** ದಿನಾಂಕ 10-10-2024ರಂದು ಶಿವಮೊಗ್ಗ ಜಿಲ್ಲೆಯ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮತ್ತು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿ ಸಹಕಾ-ರಿಯ ಬೆಳವಣಿಗೆಗಳ ಕುರಿತು ಸೂಕ್ತ ಸಲಹೆಗಳನ್ನು ನೀಡಿದರು.



**ಶಿವಮೊಗ್ಗ :** ದಿನಾಂಕ 10-10-2024ರಂದು ಶಿವಮೊಗ್ಗ ಜಿಲ್ಲೆಯ ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮತ್ತು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭೇಟಿ ನೀಡಿ ಸಹಕಾರಿಯ ಬೆಳವಣಿಗೆಗಳ ಕುರಿತು ಸೂಕ್ತ ಸಲಹೆಗಳನ್ನು ನೀಡಿದರು.



**ಶಿವಮೊಗ್ಗ :** ದಿನಾಂಕ 10-10-2024ರಂದು ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ, ಶಿವಮೊಗ್ಗ ಸಹಕಾರಿಗೆ ಅಧ್ಯಯನ ಪ್ರವಾಸದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಮಹೇಶ್ ಹೆಚ್. ಎಸ್. ಹುಲ್ಕುಳಿ ರವರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತ್ ಬರುವೆ ರವರು ಉಪಸ್ಥಿತರಿದ್ದರು.

**ಕಲಬುರಗಿ :** ದಿನಾಂಕ 24.09.2024 ರಂದು ಸಹಜಶಿವ ಸೌಹಾರ್ದ ಸಹಕಾರಿ ಸಂಘ ನಿ., ಚಿಂಚೋಳಿ ಕಲಬುರಗಿ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು, ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯರು ಹಿರೇಮಠ ಸುಕ್ಷೇತ್ರ ನರನಾಳ ರವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವೀರಭದ್ರೇಶ್ವರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಬಸವರಾಜ ಮಾಲಿಯವರು ವಹಿಸಿದ್ದರು.

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
www.souharda.coop | Ph: 080-23378375-80 | E-mail: souharda@souharda.coop

ಸಂಖ್ಯೆ : ಸಂಸ/ಶಿವಿ/ವ್ಯ.ವಿ.ತ/2024–25 /1827

**ಸುತ್ತೋಲೆ**

ದಿನಾಂಕ : 28.10.2024

**ಇವರಿಗೆ,**
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು.

**ಮಾನ್ಯರೇ,**

**ವಿಷಯ** : ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಗೆ ಅಭ್ಯರ್ಥಿಗಳನ್ನು ಕಳುಹಿಸುವ ಕುರಿತು.

**********

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕ್ಷೇತ್ರದ ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ 10 ದಿನಗಳ ದೀರ್ಘಾವಧಿ ತರಬೇತಿಯನ್ನು ಆಯೋಜಿಸುತ್ತ ಬರಲಾಗಿದೆ. ಈಗಾಗಲೇ ಹುಲಕೋಟಿ, ಕುಪ್ಪಳ್ಳಿ, ಕೆಮ್ಮಣ್ಣುಗುಂಡಿ, ಮೈಸೂರು, ಧಾರವಾಡ, ಹಂಪಿ, ಹೆಗ್ಗೋಡು, ಗುರುವಾಯನಕೆರೆ, ಯಲ್ಲಾಪುರ, ಕಮಲಾಪುರ, ಬೆಂಗಳೂರು, ಕೂಡಲಸಂಗಮ, ಶ್ರೀರಂಗಪಟ್ಟಣ, ಕೃಷಿ ವಿಶ್ವವಿದ್ಯಾಲಯ ರಾಯಚೂರು, ಒಡಿಯೂರು ಈ ಸ್ಥಳಗಳಲ್ಲಿ ನಡೆಸಿದ್ದು, ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು, ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿ ಗಣ್ಯರು ಅಭಿಪ್ರಾಯ ನೀಡಿದ್ದಾರೆ.

ಪ್ರಸ್ತುತ 23ನೇ ತಂಡದ ತರಬೇತಿ ಕಾರ್ಯಕ್ರಮವನ್ನು **ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್‌ಐಸಿಎಮ್) ಪದ್ಮನಾಭನಗರ, ಬನಶಂಕರಿ 2ನೇ ಹಂತ, ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರಿನಲ್ಲಿ ದಿನಾಂಕ: 02 ರಿಂದ 11 ಡಿಸೆಂಬರ್ 2024ರ** ವರೆಗೆ ನಡೆಸಲು ತೀರ್ಮಾನಿಸಲಾಗಿದೆ. ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.

**ತರಬೇತಿ ವಿಷಯಗಳು**

→ ಸಹಕಾರ–ಸಹಕಾರ ಸಂಘ–ಸಹಕಾರ ತತ್ವಗಳು–ಸಹಕಾರ ಕಾಯ್ದೆ–ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ–ಸಾಧನೆಗಳು

→ ಸೌಹಾರ್ದ ಸಹಕಾರ ಕಾಯ್ದೆ ಆಶಯ–ಹುಟ್ಟು, ಬೆಳವಣಿಗೆ–ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು–ಕಾಯ್ದೆಯ ಮುಖ್ಯಾಂಶಗಳು–ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ–ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು–ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು

→ ಕಚೇರಿ ಆಡಳಿತ ನಿರ್ವಹಣೆ–ಕಡತಗಳ ನಿರ್ವಹಣೆ–ಸಮಯ ಪಾಲನೆ–ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ

→ ಸಭೆಗಳು–ಆಡಳಿತ ಮಂಡಲಿ ಸಭೆ–ವಾರ್ಷಿಕ ಸಾಮಾನ್ಯ ಸಭೆ–ವಿಶೇಷ ಸಭೆ – ಪ್ರಾಯೋಗಿಕ–1

→ ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ–ಜಮಾ ಖರ್ಚು–ಲಾಭ ನಷ್ಟ ಖಾತೆ–ಆಸ್ತಿ ಜವಾಬ್ದಾರಿ ತ:ಖ್ತೆ–ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು – ಪ್ರಾಯೋಗಿಕ–2

→ ಹಣಕಾಸಿನ ನಿರ್ವಹಣೆ–ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಲಾಭದಾಯಕ ಹೂಡಿಕೆ–ಬಡ್ಡಿಯೇತರ ಆದಾಯಗಳು–ಸಾಲಗಳ ನಿರ್ವಹಣೆ–ಗುಣಮಟ್ಟಗಳ ಸಾಲ ನೀಡಿಕೆ

→ ಸಾಲ ವಸೂಲಾತಿ ಕ್ರಮಗಳು–ಮಾರಾಟಗಾರನ ಕರ್ತವ್ಯಗಳು

→ ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು

→ ಗ್ರಾಹಕ ಸೇವೆಗಳ ನಿರ್ವಹಣೆ–ವ್ಯವಹಾರ ಅಭಿವೃದ್ಧಿ ಯೋಜನೆ

→ ಒತ್ತಡ ನಿರ್ವಹಣೆ–ವ್ಯಕ್ತಿತ್ವ ವಿಕಸನ–ಮಾನವೀಯ ಮೌಲ್ಯಗಳ ನಿರ್ವಹಣೆ

→ ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.

ತರಬೇತಿ ಅವಧಿಯಲ್ಲಿ ಪಠ್ಯಕ್ರಮದಂತೆ ಪ್ರತಿ ದಿನ ಯೋಗ, ಒಂದು ಬಾರಿ ಆರೋಗ್ಯ ತಪಾಸಣೆ, ಸಾಮೂಹಿಕ ಕಾರ್ಯಕ್ರಮಗಳು, ಪ್ರಾಯೋಗಿಕಗಳು, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ವ್ಯವಸ್ಥೆ ಇರುತ್ತದೆ.

ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಅಗತ್ಯವೆನಿಸುತ್ತದೆ. ಕಾರ್ಯಕ್ರಮದಲ್ಲಿ 60 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಮುಂದಿನ ತಂಡದಲ್ಲಿ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು.

ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ಸಂಯುಕ್ತ ಸಹಕಾರಿಯು ಲಗತ್ತಿಸಿದ ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿಮಾಡಿ ಕಳುಹಿಸಿ ನಿಮ್ಮ ಸೀಟು ಕಾಯ್ದಿರಿಸಿಕೊಳ್ಳಲು ತಿಳಿಸಿದೆ.

ತರಬೇತಿಗೆ ಹಾಜರಾಗಲು ನೋಂದಾಯಿಸಿದ ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಕಿರಿಯ ಅಧಿಕಾರಿಯಾದ ಶ್ರೀಮತಿ ಸವಿತ ಎನ್.ಇ.– 6360269205 ಸಂಪರ್ಕಿಸಲು ಕೋರಿದೆ.

**–: ತರಬೇತಿ ಕಾರ್ಯಕ್ರಮದ ವಿವರಗಳು :–**

→ **ಭಾಗವಹಿಸುವ ವರ್ಗ :** ಕಾರ್ಯದರ್ಶಿಗಳು/ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು

→ **ತರಬೇತಿಯ ಅವಧಿ** : 10 ದಿನಗಳು – 8 ದಿನಗಳು ಒಳಾಂಗಣ, 2 ದಿನಗಳ ಪ್ರಾಯೋಗಿಕ ಮತ್ತು ಅಧ್ಯಯನ ಪ್ರವಾಸ.

→ **ತರಬೇತಿಯ ಸ್ಥಳ** : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್‌ಐಸಿಎಮ್) ಪದ್ಮನಾಭನಗರ, ಬನಶಂಕರಿ 2ನೇ ಹಂತ, ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರು–560070

→ **ತರಬೇತಿ ಸೌಲಭ್ಯ** : ಅಧ್ಯಯನ ಸಾಹಿತ್ಯ, ಯೋಗ ತರಬೇತಿ, ಊಟ –ಉಪಹಾರ, ವಸತಿ, ಹಾಗೂ ಉತ್ತಮ ಸಹಕಾರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.

→ **ವ್ಯವಸ್ಥೆ ನಿರ್ವಹಣೆ ಶುಲ್ಕ: ರೂ. 5,000/– + 18% ಜಿಎಸ್‌ಟಿ ಸೇರಿ ಒಟ್ಟು ಮೊತ್ತ ರೂ. 5,900/–** (ಊಟ, ವಸತಿ ವ್ಯವಸ್ಥೆಗಳಿಗಾಗಿ) ಭಾಗವಹಿಸುವ ಸಹಕಾರಿಯಿಂದ ಭರಿಸಬೇಕು.

→ **ಅಭ್ಯರ್ಥಿಗಳ ಸಂಖ್ಯೆ : 60** ಮಾತ್ರ

→ **ತರಬೇತಿಯ ದಿನಾಂಕ : 02.12.2024 ರಿಂದ 11.12.2024**

→ ತರಬೇತಿಯ ನೋಂದಣಿ ಶುಲ್ಕವನ್ನು **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು** ಇದರ ಹೆಸರಿನಲ್ಲಿ **ಚೆಕ್/ಡಿಡಿ**ಯನ್ನು ಕಳುಹಿಸುವ ಮೂಲಕ ಪಾವತಿಸುವುದು.

→ **ನೋಂದಾವಣೆಗೆ ಕೊನೆಯ ದಿನಾಂಕ: 25.11.2024**

ವಂದನೆಗಳೊಂದಿಗೆ,

Karnataka State Souharda Federal Co-operative Ltd. Reg. No. RSR/SOU/ACM 136/ Regn. 03rd/2001-02 dated 04-01-2002 * Bengaluru *

ತಮ್ಮ ವಿಶ್ವಾಸಿ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ನೋಂದಾವಣಿ ಅರ್ಜಿ ನಮೂನೆ

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

"ಸೌಹಾರ್ದ ಸಹಕಾರಿ ಸೌಧ", ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. 080-23378375-80,
ಇ-ಮೇಲ್ : Souharda@souharda.coop ವೆಬ್ ತಾಣ : www.Souharda.coop

### 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ನೋಂದಾವಣಿ ಅರ್ಜಿ (NominationForm)

ದಿನಾಂಕ : 02 ರಿಂದ 11 ಡಿಸೆಂಬರ್ 2024

ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ
ಪದ್ಮನಾಭನಗರ, ಬೆಂಗಳೂರು-560070

1. ಭಾಗವಹಿಸುವ ಪತ್ರಿನಿಧಿಯ ಹೆಸರು : ______________________
2. ಹುದ್ದೆ ಮತ್ತು ಅನುಭವ : ______________________
3. ಅಂಚೆ ವಿಳಾಸ : ______________________
______________________
4. ವಿದ್ಯಾರ್ಹತೆ : ______________________
5. ಜನ್ಮ ದಿನಾಂಕ & ವಯಸ್ಸು : ______________________
6. ಲಿಂಗ (ಗುರುತು ಹಾಕಿರಿ) : ಗಂಡು ☐ ಹೆಣ್ಣು ☐
7. ವರ್ಗ (ಗುರುತು ಹಾಕಿರಿ) : ಸಾಮಾನ್ಯ ☐ ಪರಿಶಿಷ್ಟ ಜಾತಿ ☐ ಪರಿಶಿಷ್ಟ ಪಂಗಡ ☐ ಒಬಿಸಿ ☐
8. ಪ್ರಾಯೋಜಿತ ಸೌಹಾರ್ದ ಸಹಕಾರಿ/ ಬ್ಯಾಂಕ್ ಹೆಸರು ಹಾಗೂ ವಿಳಾಸ : ______________________
______________________
______________________
9. ದೂರವಾಣಿ ಸಂಖ್ಯೆ (ವಾಟ್ಸ್ಆಪ್) : ______________________
10. ಆಧಾರ್ ನಂ. : ☐☐☐☐☐☐☐☐☐☐☐☐
11. ಇ-ಮೇಲ್ ವಿಳಾಸ : ______________________
12. ಈ ಹಿಂದೆ ತರಬೇತಿ ಪಡೆದ ವಿವರ : ______________________
13. ಅನುಭವ : ______________________

ಪ್ರತಿನಿಧಿ ಶುಲ್ಕ ಪಾವತಿಸಿರುವ ವಿವರ

- ಬ್ಯಾಂಕ್ ಹೆಸರು : ---------------------------------------
- ರೂ. ಗಳು : ---------------------------------------
- ಡಿ.ಡಿ. ನಂ : ---------------------------------------
- ದಿನಾಂಕ : ---------------------------------------

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವ ಮೂಲಕ ಸಂಯುಕ್ತ ಸಹಕಾರಿಯ ತರಬೇತಿ ನಿಯಮಗಳಿಗೆ ಬದ್ಧನಾಗಿರುತ್ತೇನೆಂದು ಒಪ್ಪಿ ಈ ಕೆಳಗೆ ಸಹಿ ಮಾಡಲಾಗಿದೆ.

ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರ ಸಹಿ

ಸಹಕಾರಿಯ ಮೊಹರು

ಭಾಗವಹಿಸುವ ಪ್ರತಿನಿಧಿಯ ಸಹಿ

## ಮನೆ ಮನೆ ಸೌಹಾರ್ದ ಬಸವಜ್ಯೋತಿ ಕಾರ್ಯಕ್ರಮ



**ಮಂಡ್ಯ** : ದಿನಾಂಕ 17.10.2024ರಂದು ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಇದರ ಸಹಯೋಗದೊಂದಿಗೆ "150ನೇ ಮನೆ ಮನೆಗೆ ಸೌಹಾರ್ದ ಬಸವಜ್ಯೋತಿ" ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಜಿ. ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಶ್ರೀ ಪ್ರಸನ್ನ ಕುಮಾರ್, ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಹಾಗೂ ಶ್ರೀ ಶರಣಗೌಡ ಜಿ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಭಾಗವಹಿಸಿದ್ದರು.

## ವಾರ್ಷಿಕ ಸಾಮಾನ್ಯ ಸಭೆ



**ಬೀದರ** : ಉಳವಿ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ 4ನೇಯ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಗುರುನಾಥ ಜ್ಯಾಂತೀಕರ್ ರವರು ಉದ್ಘಾಟಿಸಿ ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿ ಕೆ. ರವರು ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮತ್ತು ಸಹಕಾರಿಯ ಲಾಭ ವಿಂಗಡಣೆಯ ಕುರಿತು ಮಾಹಿತಿ ನೀಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶ್ರೀಮತಿ ಲಲಿತಾ ಶೆರಿಕಾರ ವಹಿಸಿದ್ದರು. ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಯಾದಗಿರಿ** : ಶ್ರೀ ರಾಚೋಟಿ ವೀರಣ್ಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಯಾದಗಿರಿ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು, ಕರ್ನಾಟಕ ಬ್ಯಾಂಕಿನ ಹಿರಿಯ ಅಧಿಕಾರಿಗಳಾದ ಶ್ರೀ ಬಾಬು ಜಮಾದಾರ ಮತ್ತು ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಕಮಲಾ ದೇವರಕಲ್ ರವರು ವಹಿಸಿದ್ದರು. ಆಡಳಿತ ಮಂಡಳಿ ಸದಸ್ಯರುಗಳು, ಸಿಬ್ಬಂದಿ ವರ್ಗದವರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪವನ ರವರು ಉಪಸ್ಥಿತರಿದ್ದರು.




**ಕಲಬುರಗಿ** : ಖಾಜಾ ಬಂದೆನವಾಜ ಅಲ್ಪಸಂಖ್ಯಾತರ ಸೌಹಾರ್ದ ಕೋ–ಅಪರೇಟಿವ್ ನಿ., ಕಲಬುರಗಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಖಾಜಾ ಬಂದೇ ನವಾಜ ಮೆಡಿಕಲ್ ಮೆಡಿಕಲ್ ಕಾಲೇಜಿನ ಆಡಿಟೋ–ರಿಯಂನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭಾಗವಹಿಸಿದ್ದರು. ಸಭೆಯಲ್ಲಿ ಉತ್ತಮ ಗ್ರಾಹಕರನ್ನು ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪವನ ಎಮ್ ಆರ್ ರವರು ಉಪಸ್ಥಿತರಿದ್ದರು.



**ಹಾಸನ :** ಬಿ.ಜಿ.ಎಸ್. ಸಂಘದ ಆವರಣದಲ್ಲಿ ಮಹಾತ್ಮ ಗಾಂಧಿಜೀಯವರ 155 ನೇ ಜನ್ಮ ದಿನಾಚರಣೆಯನ್ನು ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿ ಅವರ 120ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಸಂಘದ ಆವರಣ ಸ್ವಚ್ಛತೆ ಮಾಡಿ, ಭಜನೆ ಮಾಡುವುದರ ಮೂಲಕ ಆಚರಿಸಲಾಯಿತು. ನಿರ್ದೇಶಕರಾದ C.C ಕುಮಾರ್ ಸರ್ ಗಾಂಧೀಜಿ ಅವರ ಸರಳತೆ, ಅಹಿಂಸಾತ್ಮಕ ತತ್ವಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.



**ದಕ್ಷಿಣ ಕನ್ನಡ :** ಶ್ರೀಶಾ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಮಂಗಳೂರಿನ ರಾಮಕೃಷ್ಣ ಆಶ್ರಮದ ಬಾಲಕರ ಹಾಸ್ಟೆಲ್‌ಗೆ ಊಟದ ಸ್ಟೀಲ್ ತಟ್ಟೆಗಳನ್ನು ಇಡುವ ಸ್ಟೀಲ್‌ರ್‍ಯಾಕ್ ಅನ್ನು ಭಾನುವಾರ ಸಂಜೆ ಆಶ್ರಮದ ಹಾಸ್ಟೆಲ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಜಿತಕಾಮಾನಂದಜಿ ಅವರಿಗೆ ಹಸ್ತಾಂತರಿಸಲಾಯಿತು.

ರೂ.50000/- ಮೌಲ್ಯದ ರ್‍ಯಾಕ್‌ನಲ್ಲಿ 120 ಊಟದ ತಟ್ಟೆಗಳನ್ನು ಇಡಬಹುದು. ಇದನ್ನು ಸ್ವೀಕರಿಸಿ ಮಾತನಾಡಿದ ಮಠದ ಅಧ್ಯಕ್ಷ ಸ್ವಾಮಿ ಜಿತ ಕಾಮಾನಂದಜಿ, ಶ್ರೀಶಾ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ನೀಡಿದ ಈ ಸ್ಟೀಲ್ ರ್‍ಯಾಕ್ ನ ಅಗತ್ಯ ನಮ್ಮ ಹಾಸ್ಟೆಲ್‌ಗೆ ಇತ್ತು. ವಿದ್ಯಾರ್ಥಿಗಳು ಊಟದ ನಂತರ ತೊಳೆದ ತಟ್ಟೆಗಳನ್ನು ಇಡಲು ಇದು ತುಂಬಾ ಸಹಕಾರಿ. ಕಳೆದ ವರ್ಷವೂ ಶ್ರೀಶಾ ಸೌಹಾರ್ದ ಸೊಸೈಟಿ ಹಾಸ್ಟೆಲ್ ಮಕ್ಕಳ ಬಿಸಿನೀರು ಸ್ನಾನಕ್ಕೆ ಎರಡು ಗುಜರಾತಿ ಬಾಯ್ಲರ್‌ಗಳನ್ನು ನೀಡಿದ್ದು ಅದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಸಮಾಜಮುಖಿ ಕಾರ್ಯಗಳನ್ನು ನಿರಂತರ ಮಾಡುತ್ತಿರುವ ಶ್ರೀಶಾ ಸೌಹಾರ್ದ ಸೊಸೈಟಿ ಉತ್ತರೋತ್ತರ ಅಭಿವೃದ್ಧಿ ಹೊಂದಲಿ" ಎಂದು ಹಾರೈಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಮಾತನಾಡಿ, "ಶ್ರೀಶಾ ಸೌಹಾರ್ದ ಸೊಸೈಟಿಯ ಈ ಕಾರ್ಯ ಅತ್ಯಂತ ಉತ್ತಮವಾದ ಕಾರ್ಯವಾಗಿದೆ ಮತ್ತು ರಾಜ್ಯದ ಅನೇಕ ಸಹಕಾರಿಗಳಿಗೆ ಮಾದರಿಯಾಗಿದೆ ಸಹಕಾರಿಯ ಲಾಭಾಂಶ ಗಳಿಕೆಯಲ್ಲಿ ಒಂದಂಶವನ್ನು ಸಮಾಜಮುಖಿ ಕಾರ್ಯಗಳಿಗೆ ನೀಡುತ್ತಿರುವುದು ನಮಗೆಲ್ಲಾ ಹೆಮ್ಮೆ. ಮಠದ ಸ್ವಾಮೀಜಿಯವರ ಆಶೀರ್ವಾದ, ಮಾರ್ಗದರ್ಶನ ಸದಾ ಇರಲಿ" ಎಂದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಕನಕಗಿರಿ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು



ಶ್ರೀ ಮಹಾವೀರ ಬಿ. ಜೈನ್
(ಗೋಗಿ)
ಅಧ್ಯಕ್ಷರು



ಶ್ರೀ ಪ್ರಶಾಂತ್
ಎಸ್.ಎ
ಉಪಾಧ್ಯಕ್ಷರು

## ವಾಲ್ಮೀಕಿ ಜಯಂತಿ



**ಬೆಳಗಾವಿ:** ವಾಲ್ಮೀಕಿ ಜಯಂತಿಯನ್ನು ದಿನಾಂಕ 17-10-2024 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭಾ ಆರ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಹಾಗೂ ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ದಿನಾಂಕ 28-10-2024ರಂದು ಬೆಂಗಳೂರು ಪ್ರಾಂತದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ಹಾಗೂ ಶ್ರೀ ಭವನ್ ರಾವ್ ರವರು ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ, ಮಲ್ಲೇಶ್ವರಂ, ಬೆಂಗಳೂರು ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ದೀಪಾವಳಿ ಹಬ್ಬದ ಪ್ರಯುಕ್ತ ಸಿಹಿ ನೀಡಿ ಶುಭಾಶಯ ಕೋರಿದರು.

# ನಿಮ್ಮ ಪ್ರಶ್ನೆ – ನಮ್ಮ ಉತ್ತರ

ಸೆಪ್ಟೆಂಬರ್ ಮಾಹೆಯಲ್ಲಿ ಪ್ರಕಟವಾದ ಪ್ರಶ್ನೋತ್ತರಗಳಲ್ಲಿ ಕೆಲವು ಉತ್ತರಗಳು ಸಮರ್ಪಕವಾಗಿ ಇಲ್ಲವೆಂದು ಓದುಗರು ತಿಳಿಸಿರುತ್ತಾರೆ. ಸಮರ್ಪಕವಾದ ತಿದ್ದುಪಡಿ ಉತ್ತರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

**ಪ್ರಶ್ನೆ :** ಶ್ರೀ ಜಗದೀಶ್ ಜೋಶಿ, ಹುಬ್ಬಳ್ಳಿ. **ಉತ್ತರ :** ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಪೀಠಿಕೆ:**

ಪ್ರಶ್ನೆಗಳನ್ನು ಕೇಳುವಾಗ ಪ್ರಶ್ನೆಗಳು ಸ್ಪಷ್ಟವಾಗಿರಬೇಕು, ಊಹಾ ಪೋಹಗಳ ಮೇಲೆ ಕೇಳುವಂತಿಲ್ಲ. ಕಾನೂನಿನ ವಿಷಯದಲ್ಲಿ ಸ್ಪಷ್ಟತೆ ಕೇಳಿದರೂ ನ್ಯಾಯಾಲಯವನ್ನು ಹೊರತುಪಡಿಸಿ ವಿಷದಿಕರಣ ನೀಡತಕ್ಕದ್ದಲ್ಲ. ಕಾನೂನಿನಲ್ಲಿ ನಿರ್ಬಂಧಿಸಿಲ್ಲದ ವಿಷಯಗಳ ಬಗ್ಗೆ ಸಹಕಾರಿ ಸಂಸ್ಥೆಗಳು ತಮ್ಮ ಉಪವಿಧಿಗಳಲ್ಲಿ ಅವಶ್ಯಕವಾದ ಮತ್ತು ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸೇರ್ಪಡೆಮಾಡುವ ಅಧಿಕಾರ ಹೊಂದಿದೆ.

**ಪ್ರಶ್ನೆ: 1 ಪಂಚಾಯತ್ ದಾವಾ ಹಾಗೂ ಅಮಲ್ ಬಜಾವಣೆ ಶುಲ್ಕ ಲಾಭ ಹಾನಿಯೋ ಅಥವಾ ಅಥಾವೆಯಲ್ಲಿ ಬರತಕ್ಕ ತೋರಿಸಬೇಕೋ?**

ಪಂಚಾಯಿತಿ ದಾವಾ ಮತ್ತು ಅಮಲ್ ಬಜಾವಣೆ ಶುಲ್ಕದ ಬಗ್ಗೆ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಂಸ್ಥೆಗಳ ಪ್ರಕರಣಗಳನ್ನು ವಿಲೇವಾರಿ ಮಾಡಲು ಕರ್ನಾಟಕ ಸೇವಾ ನಿಯಮಗಳನ್ವಯ (ನಿ. 441) ಸರ್ಕಾರಿ ಅಧಿಕಾರಿಗಳ ಸೇವೆಯನ್ನು ಪಡೆದಿದ್ದು ಸರ್ಕಾರಕ್ಕೆ ಪಾವತಿಮಾಡಬೇಕಾದ ದಾವಾ ಮತ್ತು ಅಮಲ್ ಬಜಾವಣೆ ಶುಲ್ಕದ ಶೇ. 50 ನ್ನು ಮಾತ್ರ ಪಾವತಿಸುತ್ತಿದ್ದು, ಉಳಿದ ಶೇ. 50ನ್ನು ಸಂಯುಕ್ತ ಸಹಕಾರಿ ತನ್ನ ಲಾಭ–ನಷ್ಟ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದೆ. ಹೀಗೆ ಮಾಡುವಾಗ ಸಂಯುಕ್ತ ಸಹಕಾರಿಯಿಂದ ಆಗುತ್ತಿರುವ ಸಿಬ್ಬಂದಿ ವೆಚ್ಚ, ಪ್ರವಾಸ ಭತ್ಯೆ ಹಾಗೂ ಮತ್ತಿತರ ಭತ್ಯೆಗಳನ್ನು ವಜಾ ಮಾಡಿಕೊಂಡು ಉಳಿದ ಹಣವನ್ನು ಲಾಭದ ಖಾತೆಗೆ ಜಮಾ ಮಾಡಿಕೊಳ್ಳಬೇಕು.

**ಪ್ರಶ್ನೆ: 2 ಉಪವಿಧಿ ತಿದ್ದುಪಡೆ ಮೊದಲು ಒಂದು ಶೇರಿನ ಬೇಲೆ 10/– ನಂತರ 100/– ಹಳೆಯ ಶೇರಿನಂತೆ ರೂ.10/– ರಂತೆ 10 ಶೇರು ಪಡೆಯಲ್ಲಿ ಒಂದು ಪೂರ್ಣ ಶೇರು ಅಂತಾ ಪರಿಗಣಿಸಬಹುದೇ? ಅಥವಾ ಸದರಿ ಹತ್ತು ಶೇರುಗಳು ಅಪೂರ್ಣವೆಂದು ಪರಿಗಣಿಸುವಿರೋ?**

ಒಂದು ಸಹಕಾರಿಯು ತನ್ನ ಷೇರು ಹಣದ ಮುಖಬೆಲೆಯನ್ನು ರೂ. 10/– ಎಂದು ನಿಗದಿಪಡಿಸಿದ್ದು ಆನಂತರ ಅದನ್ನು ಶೇ. ರೂ. 100/– ಎಂದು ಉಪವಿಧಿಯಲ್ಲಿ ಮಾರ್ಪಾಡಿಸಿಕೊಂಡಾಗ ಪ್ರತಿಯೊಬ್ಬ ಸದಸ್ಯನಿಗೂ ನೋಟೀಸ್ ಜಾರಿ ಮಾಡಿ ಉಳಿಕೆ ರೂ. 90/–ನ್ನು ಪಾವತಿಸುವಂತೆ ಸೂಚಿಸಬೇಕು ಮತ್ತು ಅದಕ್ಕೆ ಒಂದು ನಿರ್ದಿಷ್ಟ ಅವಧಿಯನ್ನು ನಿಗದಿಪಡಿಸಬೇಕು ಆ ಅವದಿಯಲ್ಲಿ ಉಳಿಕೆ ಷೇರು ಹಣವನ್ನು ಪಾವತಿಮಾಡದಿದ್ದರೆ ಅಂತಹವರ ಹೆಸರಿನಲ್ಲಿ ಇರುವ ಷೇರು ಹಣವನ್ನು ಅಮಾನತ್ತು ಖಾತೆಗೆ ವರ್ಗಾಯಿಸಬೇಕು. ಆದರೆ ಸದಸ್ಯತ್ವದಿಂದ ತೆಗೆದು ಹಾಕಬೇಕಾದರೆ ಅವರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆ ನಡೆಸಿ, ಆಡಳಿತ ಮಂಡಳಿ ತೀರ್ಮಾನದಂತೆ ಸದಸ್ಯತ್ವದಿಂದ ತೆಗೆದು, ಭಾಗಶಃ ಷೇರು ಹಣವನ್ನು ವಾಪಸ್ ನೀಡಬೇಕು.

**ಪ್ರಶ್ನೆ : 3 ಸಂಘದಲ್ಲಿ/ಸಹಕಾರಿಯಲ್ಲಿ ರೂ.21000/– ಅಥವಾ ಮೇಲ್ಪಟ್ಟು ಸಂಬಳ ಪಡೆಯುವಾಗ, ಉಪವಿಧಿಯಲ್ಲಿ ಇರುವಂತೆ ಗರಿಷ್ಠ 2 ತಿಂಗಳ ಬೋನಸ್ಸು ಪಡೆಯಲು ಅರ್ಹರೋ?**

ಭೋನಸ್ ಕಾಯ್ದೆಯನ್ವಯ ಯಾವ ನೌಕರ ಸಿಬ್ಬಂದಿಗಳ ಮೇಲ್ವಿಚಾರಣೆಮಾಡುವ ಅಧಿಕಾರ ಹೊಂದಿರುತ್ತಾನೋ ಅಂತಹ ವ್ಯಕ್ತಿಗೆ ಬೋನಸ್ ಪಾವತಿ ಮಾಡತಕ್ಕದ್ದಲ್ಲ. ಅಂತಹ ವ್ಯಕ್ತಿಗಳಿಗೆ ಎಕ್ಸ್ ಗ್ರೇಷಿಯ ಪಾವತಿಮಾಡಲು ಬೋನಸ್ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ಬೋನಸ್ ಕಾಯ್ದೆ ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಇದು ಎಲ್ಲಾ ರಾಜ್ಯಗಳಿಗೆ ಅನ್ವಯವಾಗುತ್ತಿದ್ದರೂ, ಅಂತಹ ಸಂಸ್ಥೆಗಳು ತಮ್ಮ ಉಪವಿಧಿಯಲ್ಲಿ ಸೇ–ರಿಸಿಕೊಳ್ಳುವುದರ ಜೊತೆಗೆ ನಿಬಂಧಕರು/ಸಂಯುಕ್ತ ಸಹಕಾರಿ ಮಾರ್ಗದರ್ಶಿ ಸೂತ್ರಗಳನ್ವಯ ತಮ್ಮ ಉಪವಿಧಿಗಳನ್ನು ತಿದ್ದುಪಡಿಮಾಡಿಕೊಂಡು ನೌಕರರಲ್ಲದ ಸಿಬ್ಬಂದಿಗೆ ಎಕ್ಸ್ ಗ್ರೇಷಿಯ ಪಾವತಿ ಮಾಡಬಹುದು.

**ಪ್ರಶ್ನೆ: 4 ಒಟ್ಟು ಸಾಲಗಳಲ್ಲಿ ಭದ್ರತಾ ಹಾಗೂ ಅಭದ್ರತಾ ಸಾಲಗಳ ಕಾಯ್ದೆ ಅನುಗುಣವಾಗಿ ಅನುಪಾತ ತಿಳಿಸಿ.**

ಭದ್ರತಾ ಮತ್ತು ಅಭದ್ರತಾ ಸಾಲಗಳ ಅನುಪಾತಕ್ಕೆ ಸಂಬಂಧಪಟ್ಟಂತೆ ಸೌಹಾರ್ದ ಕಾಯ್ದೆ ಕಲಂ 53 (7)(ಎ) ಅನ್ವಯ ಸಂಯುಕ್ತ ಸಹಕಾರಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಸದಸ್ಯ ಸಹಕಾರಿಗಳು ಅಳವಡಿಸಿಕೊಳ್ಳಲು ಸೂಚಿಸಬಹುದು. ಅದನ್ನು ಸದಸ್ಯ ಸಹಕಾರಿಗಳು ತಮ್ಮ ಉಪವಿಧಿಯಲ್ಲಿ ಅಳವಡಿಸಿಕೊಂಡು ಜಾರಿಮಾಡುವ ಅಧಿಕಾರ ಹೊಂದಿದೆ. ಈಗಾಗಲೇ ಸಂಯುಕ್ತ ಸಹಕಾರಿ ಮಾನದಂಡಗಳನ್ನು ನಿಗದಿಪಡಿಸಿರುವುದ–ರಿಂದ ಅದರನ್ವಯ ಸದಸ್ಯ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ಮಾರ್ಪಾಡುಮಾಡಿಕೊಳ್ಳಬಹುದು.

**ಪ್ರಶ್ನೆ: 5 ಸ್ಥಿರಾಸ್ತಿ/ಚರಾಸ್ತಿ ಮಾರಾಟದಿಂದ ಗಳಿಸಿದ್ದು ಬಂಡವಾಳ ಮೀಸಲಿಗೆ ಹಾಕಬೇಕಾ? ಅಥವಾ ಅಕೌಂಟಿಂಗ್ ಸ್ಟಾಡರ್ಡ 10ರಂತೆ ಲಾಭಹಾನಿಗೆ ಹಾಕಬೇಕಾ?**

ಸ್ಥಿರ ಮತ್ತು ಚರಾಸ್ತಿ ಮಾರಾಟ ಮಾಡಿದಾಗ ಕ್ಯಾಪಿಟಲ್ ಗೈನ್ಸ್ ಟ್ಯಾಕ್ಸ್ ಗೆ ಒಳಪಟ್ಟು ಲಾಭ–ನಷ್ಟ ಖಾತೆಗೆ ಜಮಾ ಮಾಡಿಕೊಳ್ಳತಕ್ಕದ್ದು.

**ಪ್ರಶ್ನೆ: 6 ಕ.ರಾ.ಸೌ.ಸಂ. ಅಧಿನಿಯಮ 1997ರ ಕಲಂ 21 (ಬಿ), ಕ.ಸ.ಸಂಘ ಅಧಿನಿಯಮ 2014 ಕಲಂ 18 (1)ರ ಒಟ್ಟು ಕ್ರಮಬದ್ಧ ಸದಸ್ಯರ 15% ಸಹಸದಸ್ಯರಿರಬೇಕು. ಇವರಿಗೆ ಸಂಘ/ಸಹಕಾರಿಯಲ್ಲಿ ಎಲ್ಲತರಹದ ಅವಕಾಶವಿದ್ದು ಸದಸ್ಯರವರಿಗೆ ಹಾಗೂ ವಿಶೇಷ ಆಹ್ವಾನಿತರಿಗೆ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇದೆಯಾ?**

27ನೇ ಪುಟಕ್ಕೆ.....

# ಒಂದು ಸಹಕಾರ/ಸಹಕಾರಿ ಸಂಸ್ಥೆಯು ಆಡಳಿತ ಮಂಡಳಿ ಸದಸ್ಯ ಸಾಮಾನ್ಯ ಸಭೆಯ ಸದಸ್ಯನೇ? - ಒಂದು ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಸಹಕಾರ/ಸಹಕಾರಿ ಸಂಘದ ಸದಸ್ಯ ಎಂದರೆ ಯಾರು?**

**1959ರ ಕಾಯಿದೆ ಕಲಂ.2(ಎಫ್) ಈ ಕೆಳಕಂಡಂತೆ ಉಲ್ಲೇಖಿಸಿದೆ.**

"ಸದಸ್ಯ ಎಂದರೆ ಒಂದು ಸಹಕಾರ ಸಂಘದ ನೋಂದಣಿಯ ಸಲುವಾಗಿ ಸಲ್ಲಿಸಲಾದ ಅರ್ಜಿಯಲ್ಲಿ ಸೇರ್ಪಡೆಯಾದ ಒಬ್ಬ ವ್ಯಕ್ತಿಯ ಮತ್ತು ಈ ಅಧಿನಿಯಮ ನಿಯಮಗಳು ಮತ್ತು ಉಪವಿಧಿಗಳ ಮೇರೆಗೆ ಹಾಗೆ ನೋಂದಣಿ ಮಾಡಲ್ಪಟ್ಟ ನಂತರ ಸದಸ್ಯನೆಂದು ಪ್ರವೇಶ ಪಡೆದ ವ್ಯಕ್ತಿಯು ಮತ್ತು ಅದರಲ್ಲಿ ನಾಮ ಮಾತ್ರ ಹಾಗೂ ಸಹಸದಸ್ಯರೂ ಒಳಗೊಂಡಿರುತ್ತಾರೆ."

**1997ರ ಸೌಹಾರ್ದ ಸಹಕಾರಿ ಕಾಯಿದೆ ಕಲಂ.2(ಆರ್) ಈ ಕೆಳಕಂಡಂತೆ ಉಲ್ಲೇಖಿಸಿದೆ.**

"ಸದಸ್ಯ ಎಂದರೆ ಒಂದು ಸಹಕಾರಿಯ ನೋಂದಾವಣಿಯಾಗುವ ಮೊದಲು ಷೇರು ಬಂಡವಾಳದ ಬಗ್ಗೆ ವಂತಿಗೆ ನೀಡಿರುವ ವ್ಯಕ್ತಿ ಮತ್ತು ಅದರಲ್ಲಿ ಅಂಥ ನೋಂದಣಿಯ ತರುವಾಯ ಅಧಿನಿಯಮ, ನಿಯಮ ಮತ್ತು ಉಪನಿಯಮಗಳ ಅನುಸಾರ ಸದಸ್ಯತ್ವ ಪಡೆದುಕೊಳ್ಳಲಾದ ಒಬ್ಬ ವ್ಯಕ್ತಿ ಒಳಗೊಳ್ಳುತ್ತಾನೆ ಮತ್ತು ಒಬ್ಬ ನಾಮ ಮಾತ್ರ ಸದಸ್ಯನನ್ನು ಒಳಗೊಳ್ಳುತ್ತದೆ."

ಸಹಕಾರ ಸಂಘಗಳ ಕಾಯಿದೆ 1959ರ ಕಲಂ.16ರಲ್ಲಿ ಯಾರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೆಂದು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ.16ರಲ್ಲಿ ಯಾರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೆಂದು ನಿಗದಿ ಪಡಿಸಿದೆ. ಈ ಮೇಲ್ಕಂಡಂತೆ ಸದಸ್ಯರಾದ ವ್ಯಕ್ತಿಗಳು ಮಾತ್ರ ಒಂದು ಸಹಕಾರಿ/ಸಹಕಾರ ಸಂಘದ ಸದಸ್ಯರಾಗುತ್ತಾರೆ. ಮತ್ತು 1959ರ ಕಾಯಿದೆ ಕಲಂ.27 ಮತ್ತು ಸೌಹಾರ್ದ ಕಾಯಿದೆ ಕಲಂ.23ರಲ್ಲಿ ನಿಗದಿ ಪಡಿಸಿದ ಸಾಮಾನ್ಯ ಸಭೆಯ ಸದಸ್ಯರಾಗುತ್ತಾರೆ. ಇ ಎರಡೂ ಕಾಯಿದೆ ಅಡಿ ಸದಸ್ಯರಾದ ವ್ಯಕ್ತಿಗಳ ಆ ಸಂಸ್ಥೆಯ ಸಾಮಾನ್ಯ ಸಭೆ ಸದಸ್ಯರು ಮತ್ತು ವಾರ್ಷಿಕ ಸಭೆ/ಸಾಮಾನ್ಯಾ ಸಭೆ ಕರೆದಾಗ ಮೇಲ್ಕಂಡ ಸದಸ್ಯರು ಮಾತ್ರ ಮಹಾಸಭೆ/ಸಾಮಾನ್ಯ ಸಭೆಗೆ ಹಾಜರಾಗುವ ಹಕ್ಕುಳ್ಳವರಾಗಿರುತ್ತಾರೆ. ಅಂದರೆ ಒಂದು ಸಂಸ್ಥೆಯ ಸದಸ್ಯತ್ವ ಪಡೆದ ವ್ಯಕ್ತಿ ಮಾತ್ರ ಸಾಮಾನ್ಯ ಸಭೆ/ವಾರ್ಷಿಕ ಸಭೆಗೆ ಹಾಜರಾಗುವ ವ್ಯಕ್ತಿ, ವ್ಯಕ್ತಿಗತ ಸದಸ್ಯರೇ ಇರುವ ಸಂಸ್ಥೆಗಳ ಮಹಾಸಭೆ ಸಾಮಾನ್ಯ ಸಭೆ ನಡೆಸುವಾಗ ಇದರ ಮಹತ್ವ ಪಡೆಯುತ್ತದೆ. ಆದರೆ ಸಂಸ್ಥಾರೂಪದ ಸದಸ್ಯತ್ವ ಹೊಂದಿದ ಸಹಕಾರ ಸಂಸ್ಥೆಗಳಲ್ಲಿ ಈ ನೀತಿ ಅನ್ವಯಿಸಲಾಗದು. ಏಕೆಂದರೆ 1959ರ ಕಾಯಿದೆ ಕಲಂ.20 ಮತ್ತು ಕಲಂ.21ರಲ್ಲಿ ಮತದಾನದ ಹಕ್ಕು ಮತ್ತು ಪ್ರತಿನಿಧಿ ಹಕ್ಕನ್ನೂ ಪ್ರಸ್ತಾಪಿಸುತ್ತದೆ. ಸೌಹಾರ್ದ ಕಾಯಿದೆ ಕಲಂ.20ಬಿ ಅಡಿ ಮತದಾನದ ಹಕ್ಕನ್ನು ಉಲ್ಲೇಖಿಸುತ್ತಿದೆ.

ಪ್ರತಿಯೊಂದು ಸಹಕಾರ ಸಂಸ್ಥೆ ವರ್ಷಕ್ಕೆ ಒಮ್ಮೆ ಅಂದರೆ ಸೆಪ್ಟೆಂಬರ್ 25 ರೊಳಗೆ ತನ್ನ ಸಾಮಾನ್ಯ ಸಭೆ/ವಾರ್ಷಿಕ ಮಹಾಸಭೆ ನಡೆಸಲೇಬೇಕು. ಇಲ್ಲವಾದರೆ ಅಂತಹ ಮಂಡಳಿ ಸದಸ್ಯ 5 ವರ್ಷದ ಅವಧಿವರೆವಿಗೆ ಅನರ್ಹತೆಗೊಳಗಾಗುತ್ತದೆ.

**ಸಾಮಾನ್ಯ ಸಭೆ/ಸರ್ವಸದಸ್ಯರ ಸಭೆ ಎಂದರೇನು**

ಪ್ರತಿಯೊಂದು ಸಹಕಾರ ಸಂಸ್ಥೆ ಸಹಸದಸ್ಯರ/ನಾಮ ಮಾತ್ರ ಸದಸ್ಯರನ್ನು ಹೊರತು ಪಡಿಸಿ, ತನ್ನ ಸದಸ್ಯರ ಸಭೆ ಕರೆಯತಕ್ಕದ್ದು. ಇದರಲ್ಲಿ ಅನರ್ಹ, ಸದಸ್ಯತ್ವದಿಂದ ತೆಗೆಯಲ್ಪಟ್ಟ ವ್ಯಕ್ತಿಗಳುಬಿಡತಕ್ಕದ್ದು. ಅಂದರೆ ಸದಸ್ಯರಲ್ಲದವರು ಸಾಮಾನ್ಯ/ವಾರ್ಷಿಕ ಸಭೆಗೆ ಹಾಜರಾಗತಕ್ಕದ್ದಲ್ಲ. ಇದು ಸದಸ್ಯರಿಗೆ ಮಾತ್ರ ಸೀಮಿತವಾದ ಸಭೆ.

ಸದಸ್ಯರಲ್ಲದವರು ಸಾಮಾನ್ಯ/ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದೇ? ಎರಡೂ ಕಾಯಿದೆ ಅನ್ವಯ ಸದಸ್ಯರಲ್ಲದವರು ಸಭೆಗೆ ಹಾಜರಾಗತಕ್ಕದ್ದಲ್ಲ. ಹಾಜರಿದ್ದ ಸದಸ್ಯರ ಸಹಿ ಪಡೆದ ನಂತರ ಮತ್ತು ಸಭೆಗೆ ಅವಶ್ಯಕವಾದ ಕೋರಂಗೆ ಸಹಿ ಮಾಡಿದ ಸದಸ್ಯರ ಹಾಜರಾತಿಯಂತೆ ಸಭೆ ನಡೆಸತಕ್ಕದ್ದು. ಇದು ಸದಸ್ಯರಿಗೆ ಸೀಮಿತವಾದ ಮತ್ತು ಸಾಮಾನ್ಯ ಸಭೆಗೆ ಹಾಜರಾಗುವ ಅರ್ಹತೆ ಇರುವ ಸದಸ್ಯರು ಮಾತ್ರ ಪ್ರವೇಶ ಪಡೆಯುತ್ತಾರೆ.

ಗ್ರಾಮಾಂತರ ಪ್ರದೇಶದಲ್ಲಿ ಸದಸ್ಯರಲ್ಲದ ವ್ಯಕ್ತಿಗಳು ಅಂದರೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಅಥವಾ ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸಿ, ಅವರು ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುತ್ತದೆ. ಇದು ಶಾಸನಾತ್ಮಕ ವಿಡಂಬನೆ. ಅಂತಹ ವ್ಯಕ್ತಿಗಳು ಸದಸ್ಯರಾಗಿದ್ದರೆ, ಸಭೆಯ ಮುಂಭಾಗದಲ್ಲಿ ಕುಳಿತು ಸಭೆ ನಡೆಯುವಾಗ ಸಭೆಯಲ್ಲಿ ಭಾಗವಹಿಸಬಹುದು. ಆದರೆ ವೇದಿಕೆಯಿಂದ ಭಾಷಣ ಮಾಡಲಾಗದು.

**ಆಡಳಿತ ಮಂಡಳಿ ಸದಸ್ಯರು ವೇದಿಕೆಯನ್ನು ಅಲಂಕರಿಸಬಹುದೇ?**

ವ್ಯಕ್ತಿಗತ ಸದಸ್ಯರನ್ನೇ ಹೊಂದಿರುವ ಸಹಕಾರ ಸಂಸ್ಥೆಯಲ್ಲಿ ಎಲ್ಲರೂ ಸದಸ್ಯರ ಕರ್ತವ್ಯ ನಿರ್ವಹಿಸಬಹುದೆ. ಸದಸ್ಯರಾಗಿ ಸಭೆಯ ಮುಂಭಾಗದಲ್ಲಿ ಕುಳಿತು ಭಾಗವಹಿಸಬೇಕು. ಸಹಕಾರ ಚಳುವಳಿಯಲ್ಲಿ ರಾಜಕೀಯ ಪ್ರವೇಶ

ಮಾಡಿದ ನಂತರ, ಎಲ್ಲಾ ಸಹಕಾರ ಸಂಸ್ಥೆಗಳ ಸಾಮಾನ್ಯ/ವಾರ್ಷಿಕ ಸಭೆಯಲ್ಲಿ ವೇದಿಕೆ ಮೇಲೆ ಎಲ್ಲಾ ಮಂಡಳಿ ಸದಸ್ಯರು ಕುಳಿತು ತಾವು ಸದಸ್ಯರಿಗಿಂತ ಮೇಲು ಎಂದು ತೋರಿಸುವ ಪ್ರಯತ್ನ ನಡೆಸಲಾಗುತ್ತದೆ. ವೇದಿಕೆಯಲ್ಲಿ ಸಹಕಾರಿ ಸಂಸ್ಥೆಯ ಪರವಾಗಿ ಆ ಸಂಸ್ಥೆಯ ಅಧ್ಯಕ್ಷರು ಮತ್ತು ಆ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕನನ್ನು ಹೊರತು ಪಡಿಸಿ ಮತ್ಯಾರೂ ಕೂರತಕ್ಕದ್ದಲ್ಲ. ಸಹಕಾರಿ ಪರವಾಗಿ ಮುಖ್ಯಕಾರ್ಯನಿರ್ವಾಹಕನ ಜೊತೆ ಸಹಕಾರಿ ಸಂಸ್ಥೆಯ ಅಧ್ಯಕ್ಷ ಮಾತ್ರ ವೇದಿಕೆಯಲ್ಲಿ ಇರಬೇಕು. ಸದಸ್ಯರು ಕೇಳಿದ ಪ್ರಶ್ನೆಗಳು ಮತ್ತು ಸಮಜಾಯಿಷಿಗೆ ಉತ್ತರ ನೀಡಬೇಕು. ಇಲ್ಲವಾದರೆ, ಮಂಡಳಿ ಸದಸ್ಯರೆಲ್ಲರೂ ವೇದಿಕೆಯನ್ನು ಕುಳಿತು ಏನು ಮಾಡುತ್ತಾರೆ? ಅವರಿಗೆ ಉತ್ತರ ನೀಡುವ ಅಧಿಕಾರ ಇರುವುದಿಲ್ಲ. ಇದರ ಜೊತೆಗೆ ಪ್ರಾಥಮಿಕ ಸಹಕಾರ ಸಂಸ್ಥೆ ಹೊರತು ಪಡಿಸಿ, ಉಳಿದ ಎಲ್ಲಾ ಸಂಸ್ಥೆಗಳನ್ನು ಮಂಡಳಿ ಸದಸ್ಯರು, ಅವರು ಪ್ರತಿನಿಧಿಸುವ ಸಹಕಾರ ಸಂಸ್ಥೆಯಿಂದ ಸಾಮಾನ್ಯ ಸಭೆ ನಾಮ ನಿರ್ದೇಶಕನಾಗಿದ್ದರೇ ಮಾತ್ರ ಹಾಜರಿರಬಹುದು. ಆದರೆ ಬಹಳಷ್ಟು ಸಂಸ್ಥೆಗಳಿಂದ ಬರುವ ಪ್ರತಿನಿಧಿಗಳು ಆ ಸಹಕಾರ ಸಂಸ್ಥೆಯ ನಿರ್ದೇಶಕನನ್ನು ನಾಮ ನಿರ್ದೇಶನ ಮಾಡಿದಾಗ ಮಾತ್ರ ಅವರು, ಆ ಸಾಮಾನ್ಯ ಸಭೆಯಲ್ಲಿ ಹಾಜರಾಗಲು ಅರ್ಹತೆ ಹೊಂದಿರುತ್ತಾರೆ. ಇಲ್ಲವಾದರೆ ಮಂಡಳಿ ಸದಸ್ಯರ ಜೊತೆ ಅವರು ಪ್ರತಿನಿಧಿಸುವ ಸಹಕಾರ ಸಂಘಗಳಿಂದ ಮತ್ತೊಬ್ಬನನ್ನು ನಾಮ ನಿರ್ದೇಶಕ ಮಾಡಿದ್ದರೆ, ಅಂತಹ ಮಂಡಳಿ ಸದಸ್ಯ ಸಾಮಾನ್ಯ ಸಭೆಯಲ್ಲಿ ಹಾಜರಾಗುವ ಅರ್ಹತೆ ಹೊಂದಿರುವುದಿಲ್ಲ. ಏಕೆಂದರೆ ಒಂದು ಸಹಕಾರಿ ಸಂಸ್ಥೆಯಿಂದ ಒಬ್ಬ ಪ್ರತಿನಿಧಿಗೆ ಬದಲಾಗಿ ಇಬ್ಬರಿಗೆ ಅವಕಾಶವಿಲ್ಲ. ಈ ಹಿಂದೆ 1959ರ ಕಾಯಿದೆ ಕಲಂ.20ರ ಮೊದಲನೇ ಪರಂತುಕದಲ್ಲಿ ಸರ್ಕಾರದಿಂದ ನಾಮ ನಿರ್ದೇಶಕನಾದ ಪ್ರತಿಯೊಬ್ಬ ವ್ಯಕ್ತಿಗೂ ಒಂದು ಮತ ನೀಡುವ ಅವಕಾಶವಿತ್ತು. ಅದನ್ನು ಹೊರತು ಪಡಿಸಿ ಯಾವುದೇ ಸಹಕಾರ ಸಂಸ್ಥೆ ಪ್ರತಿನಿಧಿಯಾಗಿ ಬಂದಾಗ ಒಂದಕ್ಕಿಂತ ಹೆಚ್ಚುಮತ ನೀಡಲು ಅಥವಾ ಪ್ರತಿನಿಧಿ ಕಳುಹಿಸಲು ಅವಕಾಶವಿಲ್ಲ.

ಸಹಕಾರ ಸಂಸ್ಥೆಗಳ ಸಾಮಾನ್ಯ ಸಭೆ/ವಾರ್ಷಿಕ ಸಭೆ ಅಥವಾ ವಿಶೇಷ ಮಹಾ ಸಭೆಯಲ್ಲಿ ಸದಸ್ಯರಲ್ಲದವರು ಹಾಜರಾಗಿರುವುದಕ್ಕೆ ಉದಾಹರಣೆ ನೀಡುವುದಾದರೆ, ಸಾಮಾನ್ಯ ಸಭೆ ಹಾಜರಾತಿ 1200 ಇದ್ದರೆ, ಸದಸ್ಯರಿಗೆ ಉಪಹಾರ ವ್ಯವಸ್ಥೆ ಮಾಡಿರುವುದು 3000–3500 ಎಂದಿದ್ದಾಗ ಇದು ಆಭಾಸಕ್ಕೆ ಕಾರಣವಾಗುತ್ತದೆ. ಸದಸ್ಯರಿಗೆ ಊಟದ ವ್ಯವಸ್ಥೆ ಅಥವಾ ಭತ್ಯ ಅಥವಾ ಉಡುಗೊರೆ ನೀಡುವುದುರ ಬಗ್ಗೆ ನಾನು ಏನನ್ನು ಹೇಳ ಬಯಸುವುದಿಲ್ಲ. ಇದರ ಜೊತೆಗೆ ಪ್ರತಿವರ್ಷ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ ನಿರ್ದೇಶಕರಿಗೆ ಉಡುಗೊರೆ ನೀಡುವುದರ ಬಗ್ಗೆ ಸಹಕಾರ ಸಂಸ್ಥೆಗಳು ನಿಬಂಧಕರು ನಿರ್ದೇಶನ ನೀಡಿ, ನಿಯಂತ್ರಿಸಲು ಪ್ರಯತ್ನಪಟ್ಟರೂ ಆ ಸಂಸ್ಥೆಗಳು ಅಧಿಕೃತವಾಗಿ ಅಥವಾ ಅನಧಿಕೃತವಾಗಿ ನೀಡುವ ಲಕ್ಷಾಂತರ ಬೆಲೆ ಉಡುಗೊರೆಯಲ್ಲಿ ನಿಬಂಧಕರು ಅಥವಾ ಅವರ ಪ್ರತಿನಿಧಿಗಳು ಸ್ವೀಕರಿಸುತ್ತಾರೆ. ಅಂದರೆ ಅಂತಹ ಉಡುಗೊರೆ ನೀಡಿದ ಬಗ್ಗೆ ನಿಬಂಧಕರು ಹೇಗೆ ಕ್ರಮ ಜರುಗಿಸಲು ಸಾಧ್ಯ. ಹಲವಾರು ಸಂಸ್ಥೆಗಳು ಇದನ್ನು ಉಡುಗೊರೆ ಎಂದು ಲೆಕ್ಕ ಪತ್ರಗಳಲ್ಲಿ ನಮೂದಿಸದೇ ಪ್ರತ್ಯೇಕ ವ್ಯವಹಾರದ ಮೂಲಕ ಪಾವತಿ ಮಾಡುತ್ತಾರೆ. ಇದು ಮಂಡಳಿ ಸೇವೆ ಉಚಿತ ಎಂಬ ನೀತಿಗೆ ಮಂಗಳ ಹಾಡಿದಂತೆ. ಬೇಲಿಯೇ ಹೊಲ ಮೇಯಿದರೆ, ಹೊಲ ಕಾಯುವವನು ಯಾರು? ಎಂಬ ನೀತಿಗೆ ತಿಲಾಂಜಲಿ.

.....25ನೇ ಪುಟದಿಂದ

ಸದಸ್ಯರು ಯಾರು ಎಂಬುದನ್ನು ಕಾಯ್ದೆ ಕಲಂ 2(ಆರ್) ರಲ್ಲಿ ವಿವರಿಸಿದೆ. ಇದರಲ್ಲಿ ಸಹ ಸದಸ್ಯರು ಹಾಗೂ ನಾಮಮಾತ್ರ ಸದಸ್ಯರು ಸೇರಿರುವುದರಿಂದ ಅಂತಹ ವ್ಯಕ್ತಿಗಳ ಸದಸ್ಯತ್ವ ಪಡೆಯಲು ಪಾಲು ಬಂಡವಾಳ ಹೂಡುವ ಅವಕಾಶ ಇಲ್ಲದಿರುವುದರಿಂದ ಅಂತಹ ವ್ಯಕ್ತಿಗಳನ್ನು ಹೊರತುಪಡಿಸಿ, ಸಹಕಾರಿಯು ಸೇರಿಸಿಕೊಂಡ ಸದಸ್ಯರು (ಸ್ವಸಹಾಯ ಗುಂಪುಗಳು ಸೇರಿ) ಅಂತಹ ಸದಸ್ಯರು ಸಾಮಾನ್ಯ ಸಭೆಯಲ್ಲಿ ಹಾಜರಾಗಿ ಭಾಗವಹಿಸುವ ಅವಕಾಶ ಇದೆ. ಸ್ವಸಹಾಯ ಮತ್ತು ಇತರೆ ಸಂಘ ಸಂಸ್ಥೆಗಳು ಸದಸ್ಯರಾಗಿದ್ದರೆ. ಅವರ ಪ್ರತಿನಿಧಿ ಹಾಜರಾಗುವ ಅವಕಾಶ ಇದೆ. ಸಹ ಸದಸ್ಯರು ಪಾಲು ಬಂಡವಾಳ ಹೂಡಿದರೂ ಅವರು ಲಾಭಾಂಶ ಪಡೆಯಬಹುದೇ ಹೊರತು, ಸಾಮಾನ್ಯ ಸಭೆಯಲ್ಲಿ ಹಾಜರಾಗುವ ಹಕ್ಕು ಇರುವುದಿಲ್ಲ.

**ಪ್ರಶ್ನೆ: 7 ಇತ್ತೀಚಿನ RBI, ಸೊತ್ತೋಲಿಯಂತೆ ಲಾಭಾಂಶ ಸರಿಪಡಿಸುವ ನಿಧಿ ಲಾಭದಲ್ಲಿ ವಿಂಗಡಣೆಯು ತೆಗೆದು ಹಾಕಿದೆ ಇನ್ನುಂದೆ ಮತ್ತೆ ಲಾಭದಲ್ಲಿ ವಿಂಗಡಣೆ ಮಾಡಬಾರದೆಂದು ಇದೆ. ಸದರವು ಸಹಕಾರಿಗೆ ಸಂಬಂಧ ಇದೆ ಅಥವಾ ಇಲ್ಲವೋ?**

ಭಾರತೀಯ ರಿಸರ್ವ್ ಬ್ಯಾಂಕ್ನವರು ರೂಪಿಸುವ ನೀತಿಗಳು ಆರ್ಥಿಕ ಸಂಸ್ಥೆಗಳಿಗೆ ಸಂಬಂಧಪಟ್ಟಿದ್ದರೂ ಅವುಗಳು ನೇರವಾಗಿ ಅನ್ವಯವಾಗುವುದು ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಲೈಸೆನ್ಸ್ ಪಡೆದ ಸಂಸ್ಥೆಗಳಿಗೆ ಮಾತ್ರ. ಸಹಕಾರಿ ಸಂಸ್ಥೆಗಳು ಇದನ್ನು ಅಳವಡಿಸಿಕೊಳ್ಳಬೇಕೆಂದು ತೀರ್ಮಾನಿಸಿದರೆ. ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 53(7)(ಎ) ಅನ್ವಯ ಹೊರಡಿಸಿದ ಮಾರ್ಗದರ್ಶಿ ಸೂತ್ರಗಳ ಪೂರಕವಾಗಿ ಅಥವಾ ಮಾರ್ಪಾಡುಗಳ ಮುಖಾಂತರ ಉಪವಿಧಿಗಳಲ್ಲಿ ಸೇರಿಸಿಕೊಂಡು ಜಾರಿಮಾಡುವ ಅಧಿಕಾರ ಹೊಂದಿರುತ್ತದೆ.

ಇನ್ನು ಮುಂದೆ ಯಾರೇ ಪ್ರಶ್ನೆಯನ್ನು ಕೇಳಬೇಕಾದರೆ ಪ್ರಶ್ನೆಯಲ್ಲಿ ಸ್ಪಷ್ಟತೆ ಇರಬೇಕು ಹಾಗೂ ಕಾನೂನಿನಲ್ಲಿ ಇರುವ ಅಂಶಗಳ ಬಗ್ಗೆ ಸ್ಪಷ್ಟನೆ ಕೇಳಿದರೆ ಅದನ್ನು ನೀಡುವ ಅಧಿಕಾರ ನಿಬಂಧಕರಿಗಾಗಲೀ, ಸಂಯುಕ್ತ ಸಹಕಾರಿಗಾಗಲೀ ಇರುವುದಿಲ್ಲ.

# ವಿಶ್ವ ಸಂಸ್ಥೆಯಿಂದ ಅಂತರರಾಷ್ಟ್ರೀಯ ಸಹಕಾರಿಗಳ ವರ್ಷ 2025ರ ಲೋಗೋ ಅನಾವರಣ ಇಂಗ್ಲೀಷ್, ಫ್ರೆಂಚ್, ಸ್ಪ್ಯಾನಿಷ್, ಅರೇಬಿಕ್, ಚೈನೀಸ್ ಮತ್ತು ರಷ್ಯನ್ ಭಾಷೆಗಳಲ್ಲಿ ಲೋಗೋ ಲಭ್ಯ

**ಮೂಲ: ಅಜಯ್ ಝಾ, ಇಂಡಿಯನ್ ಕೋಆಪರೇಟಿವ್  ಅನುವಾದ: ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.**

International Year of Cooperatives
2025
Cooperatives Build a Better World

ವಿಶ್ವ ಸಂಸ್ಥೆಯು (UN) 2025ರ ಅಂತರಾಷ್ಟ್ರೀಯ ಸಹಕಾರಿಗಳ ವರ್ಷ (IYC2025) ಲೋಗೋವನ್ನು ದಿನಾಂಕ 21 ಅಕ್ಟೋಬರ್ 2024ರಂದು ಸೋಮವಾರ ಬಿಡುಗಡೆ ಮಾಡಿದೆ ಎಂದು ಇಂಟರ್ ನ್ಯಾಷನಲ್ ಕೋಆಪರೇಟಿವ್ ಅಲೈಯನ್ಸ್ ಘೋಷಿಸಿದೆ. ಇದನ್ನು ಬಳಸಲು ಬಯಸುವ ಸಂಸ್ಥೆಗಳು ಅಗತ್ಯ ಸೂಚನೆಗಳನ್ನು ಅನುಸರಿಸಬೇಕಾಗುತ್ತದೆ.

ಲೋಗೋ ಪ್ರಸ್ತುತ ಇಂಗ್ಲೀಷ್, ಫ್ರೆಂಚ್, ಸ್ಪ್ಯಾನಿಷ್, ಅರೇಬಿಕ್, ಚೈನೀಸ್ ಮತ್ತು ರಷ್ಯನ್ ಭಾಷೆಗಳಲ್ಲಿ ಲಭ್ಯವಿದೆ. ಸಹಕಾರಿ ಸಂಸ್ಥೆಗಳ ಪ್ರಚಾರ ಮತ್ತು ಪ್ರಗತಿಗಾಗಿ ಮೀಸಲಾದ ಯುಎನ್ ಸಮಿತಿಯು (COPAC) ನವೆಂಬರ್‌ನಲ್ಲಿ ಐಚಿಅ2025 ರ ವೆಬ್‌ಸೈಟ್ ಅನ್ನು ಬಿಡುಗಡೆ ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

"ಲೋಗೋವು ಜನ-ಕೇಂದ್ರಿತ ಉದ್ಯಮಗಳ ಸಾಮೂಹಿಕ ಕೆಲಸವನ್ನು ಪ್ರತಿನಿಧಿಸುತ್ತದೆ ಮತ್ತು ಬಣ್ಣಗಳು ಸಹಕಾರಿಗಳು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ಪರಿಸರ ಆಯಾಮಗಳಲ್ಲಿ 2030ರ ಕಾರ್ಯಸೂಚಿಗೆ ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ಒತ್ತಿಹೇಳುತ್ತವೆ" ಎಂದು ಇಂಟರ್ ನ್ಯಾಷನಲ್ ಕೋಆಪರೇಟಿವ್ ಅಲೈಯನ್ಸ್‌ನ ಡೈರೆಕ್ಟರ್ ಜನರಲ್ ಜೆರೋನ್ ಡೌಗ್ಲಾಸ್‌ರವರು ಹೇಳಿದ್ದಾರೆ. ಮುಂದುವರೆದು, ಉತ್ತಮ ಜಗತ್ತನ್ನು ನಿರ್ಮಿಸಲು ಸಹಕಾರಿ ಸಂಸ್ಥೆಗಳು ಏನು ಮಾಡುತ್ತಿವೆ ಎಂಬುದರ ಕುರಿತು ತಮ್ಮ ಹೆಮ್ಮೆಯನ್ನು ಹಂಚಿಕೊಳ್ಳಲು ಮತ್ತು 2025ರಲ್ಲಿ ಅಂತರ ರಾಷ್ಟ್ರೀಯ ಸಹಕಾರಿ ವರ್ಷದ ಲಾಭವನ್ನು ಪಡೆಯಲು ವಿಶ್ವಾದಾದ್ಯಂತ ಸಹಕಾರಿ ಸಂಸ್ಥೆಗಳನ್ನು ಆಹ್ವಾನಿಸಲಾಗುತ್ತಿದೆ. ನವ ದೆಹಲಿಯಲ್ಲಿನ ಜಾಗತಿಕ ಸಹಕಾರ ಸಮ್ಮೇಳನದಲ್ಲಿ ಲಾಂಛನದ ಅಧಿಕೃತ ಬಿಡುಗಡೆಯು ನಮ್ಮ ಪ್ರಯಾಣಕ್ಕೆ ಮತ್ತೊಂದು ಮೈಲಿಗಲ್ಲು ಎಂದು ತಿಳಿಸಿದ್ದಾರೆ.

ಐಚಿಅ2025 ಲೋಗೋವು ಪ್ರಪಂಚದಾದ್ಯಂತ ಜನರು ಉತ್ತಮ ಜಗತ್ತನ್ನು ನಿರ್ಮಿಸಲು ಪರಸ್ಪರ ಸಂಪರ್ಕ ಸಾಧಿಸುವುದನ್ನು ವಿವರಿಸುತ್ತದೆ. ಇದು ಸುಸ್ಥಿರ ಅಭಿವೃದ್ಧಿ ಗುರಿಗಳ ವರ್ಣ ಚಿತ್ರದ ಗುರುತಿನಿಂದ ಪ್ರೇರಿತವಾದ ಮೂರು ಬಣ್ಣಗಳನ್ನು ಒಳಗೊಂಡಿದೆ, ಕೆಂಪು ಸಮಾಜವನ್ನು ಪ್ರತಿನಿಧಿಸುತ್ತದೆ, ನೀಲಿ ಬಣ್ಣವು ಆರ್ಥಿಕತೆಯನ್ನು ಪ್ರತಿನಿಧಿಸುತ್ತದೆ ಮತ್ತು ಹಸಿರು ಪರಿಸರವನ್ನು ಪ್ರತಿನಿಧಿಸುತ್ತದೆ. ಇದು ಒಟ್ಟಾರೆಯಾಗಿ ಸಹಕಾರಿ ಸಂಸ್ಥೆಗಳು ಸುಸ್ಥಿರ ಅಭಿವೃದ್ಧಿಗೆ ನೀಡುವ ಕೊಡುಗೆಗಳನ್ನು ಪ್ರತಿನಿಧಿಸುತ್ತದೆ.

ಜೂನ್ 19ರಂದು ಘೋಷಿಸಲಾದ IYC2025ರ ಧ್ಯೇಯವಾಕ್ಯ "ಸಹಕಾರಿ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸುತ್ತವೆ" ಇದು ಸಹಕಾರಿ ಸಂಸ್ಥೆಗಳು ಎಲ್ಲೆಡೆ ಹೊಂದಿರುವ ನಿರಂತರ ಜಾಗತಿಕ ಪ್ರಭಾವವನ್ನು ಪ್ರದರ್ಶಿಸುತ್ತದೆ. ಅನೇಕ ಜಾಗತಿಕ ಸವಾಲುಗಳನ್ನು ಜಯಿಸಲು ಸಹಕಾರಿ ಮಾದರಿಯು ಒಂದು ಅತ್ಯಗತ್ಯ ಪರಿಹಾರವಾಗಿದೆ ಮತ್ತು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDGs) ಸಾಧಿಸಲು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂಬುದರ ಕುರಿತು ಧ್ಯೇಯವು ಬೆಳಕು ಚೆಲ್ಲುತ್ತದೆ.

"ಅಂತರರಾಷ್ಟ್ರೀಯ ಸಹಕಾರಿ ವರ್ಷ 2025ರ ಆಚರಣೆ ಮತ್ತು ಕ್ರಿಯೆ ಎರಡಕ್ಕೂ ಒಂದೇ ಸಮಯವಾಗಿದೆ" ಎಂದು ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯ (DESA) ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಅಂಡರ್-ಸೆಕ್ರೆಟರಿ-ಜನರಲ್ ಲಿ ಜುನ್ಹುವಾರವರು ತಿಳಿಸಿದ್ದಾರೆ.

"ಸಹಕಾರಿ ಸಂಸ್ಥೆಗಳು ಉದ್ಯಮ ಮತ್ತು ಸಮುದಾಯದ ಮಾದರಿಯನ್ನು ಒಳಗೊಂಡಿರುತ್ತವೆ, ಇಲ್ಲಿ ಸೇರ್ಪಡೆ, ಸಬಲೀಕರಣ ಮತ್ತು ಸಾಮಾಜಿಕ ಸ್ಥಿತಿಸ್ಥಾಪಕತ್ವವು ಆದಾಯ ಮತ್ತು ಲಾಭದಷ್ಟೇ ಮೌಲ್ಯಯುತವಾಗಿದೆ. ಸಹಕಾರಿ ಸಂಸ್ಥೆಗಳು ಬಡತನ ನಿರ್ಮೂಲನೆ, ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯ ಸಾರಥಿಯಾಗಿದ್ದು, ಈ ಪ್ರಕ್ರಿಯೆ ನಿರಂತರವಾಗಿರುತ್ತದೆ, ಪೂರ್ಣ ಮತ್ತು ಉತ್ಪಾದಕ ಉದ್ಯೋಗವನ್ನು ಬೆಂಬಲಿಸುತ್ತವೆ ಹಾಗೂ ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತವೆ. ಒಟ್ಟಾರೆಯಾಗಿ, ಶಾಶ್ವತವಾದ ಪರಿವರ್ತಕ ಬದಲಾವಣೆಯನ್ನು ಸೃಷ್ಟಿಸಲು ಸಹಕಾರದ ಶಕ್ತಿಯನ್ನು ಪ್ರದರ್ಶಿಸೋಣ" ಎಂದು ಯುಎನ್ ಅಧಿಕಾರಿಯೋರ್ವರು ತಿಳಿಸಿದ್ದಾರೆ.

# ಬೆಳಕಿನ ಹಬ್ಬ ದೀಪಾವಳಿ

## ದೀಪಾವಳಿ ವಿಜಯದ ಸಂತೋಷ ಮತ್ತು ಸಮೃದ್ಧಿಯ ಸಂಕೇತ

– ಶ್ರೀಮತಿ ಸವಿತ ಎನ್. ಇ. ಕರಾಸೌಸಂಸನಿ., ಬೆಂಗಳೂರು



ಭಾರತೀಯರಿಗೆ ಹಬ್ಬಗಳೆಂದರೆ ನಮ್ಮ ಸನಾತನ ಸಂಸ್ಕೃತಿಯ ಸಂಸ್ಕಾರ ಮತ್ತು ಸಂಪ್ರದಾಯಗಳ ಪ್ರತೀಕವಾಗಿದೆ. ಹಾಗೆ ನೋಡಿದರೆ, ಹಿಂದೂಗಳಿಗೆ ವರ್ಷದ 365 ದಿನವೂ ಒಂದಲ್ಲಾ ಒಂದು ಹಬ್ಬವೇ. ನಮ್ಮಲ್ಲಿ ಆಚರಿಸುವ ಪ್ರತಿಯೊಂದು ಹಬ್ಬಕ್ಕೂ ಅದರದೇ ಆದ ಪ್ರಾಕೃತಿಕ, ನೈಸರ್ಗಿಕ ಸಂಬಂಧಗಳಿದ್ದರೂ ಎಲ್ಲಾ ಹಬ್ಬಗಳೂ ಮನರಂಜನೆ ಜೊತೆಗೆ ಸಂಬಂಧಗಳನ್ನು ಬೆಸೆಸುವ ಕೊಂಡಿಗಳೇ ಆಗಿವೆ. ಎಲ್ಲದಕ್ಕಿಂತಲೂ ಸಮಾಜದಲ್ಲಿ ಎಲ್ಲರ ಆರ್ಥಿಕ ಸುಭದ್ರತೆಯನ್ನು ತರುವುದೇ ಈ ಹಬ್ಬಗಳ ಮುಖ್ಯ ಧ್ಯೇಯವಾಗಿದೆ ಎಂದರೂ ತಪ್ಪಾಗಲಾರದು.

ಈ ಹಬ್ಬಗಳ ಮುಖಾಂತರ ಎಲ್ಲರೂ ತಮ್ಮ ತಮ್ಮ ಮನೆಗಳನ್ನು ಶುಚಿರ್ಭೂತಗೊಳಿಸಿ, ತಳಿರು ತೋರಣಗಳಿಂದ ಮನೆಗಳನ್ನು ಸಿಂಗರಿಸಿ ಮನೆಯ ಮುಂದೆ ದೊಡ್ಡ ದೊಡ್ಡ ಬಣ್ಣ ಬಣ್ಣದ ರಂಗೋಲಿಗಳನ್ನು ಬಿಡಿಸಿ, ಮನೆಯ ಪ್ರತಿಯೊಬ್ಬ ಸದಸ್ಯರೂ ಅಭ್ಯಂಜನ ಮಾಡಿ ಹೊಸ ಹೊಸ ಬಟ್ಟೆಗಳನ್ನು ಧರಿಸಿ, ಯಥಾಶಕ್ತಿ ಭಕ್ತಿಯಿಂದ ದೇವರನ್ನು ಪೂಜಿಸಿ ಆಯಾಯ ಕಾಲಕ್ಕೆ ಮತ್ತು ಹಬ್ಬಗಳ ಅನುಗುಣವಾಗಿ ಸಿಹಿ ಪದಾರ್ಥಗಳನ್ನು ಮತ್ತು ಭೋಜನಗಳನ್ನು ಸಿದ್ಧಪಡಿಸಿ ದೇವರಿಗೆ ಸಮರ್ಪಿಸಿ, ಪ್ರಸಾದ ರೂಪದಲ್ಲಿ ಬಂಧುಗಳು ಮತ್ತು ನೆರೆ–ಹೊರೆಯವರೊಂದಿಗೆ ಪರಸ್ಪರ ಹಂಚಿಕೊಂಡು ಯಥೇಚ್ಚವಾಗಿ ತಿಂದುಂಡು ಸಂಭ್ರಮಿಸುವುದೇ ಹಬ್ಬಗಳ ಆಚರಣೆಯ ಹಿಂದಿರುವ ಮುಖ್ಯ ಧ್ಯೇಯೋದ್ದೇಶವಾಗಿದೆ.

ಇನ್ನು ದೀಪಾವಳಿ ಎಂದರೆ ಹೆಸರೇ ಹೇಳುವಂತೆ ಬೆಳಕಿನ ಹಬ್ಬ, ದೀಪಗಳ ಹಬ್ಬ. ಉಳಿದೆಲ್ಲಾ ಹಬ್ಬಗಳ ಆಚರಣೆಗಳು ಒಂದೆರಡು ದಿನಗಳ ಮಟ್ಟಿಗೆ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮಡಿಹುಡಿಗೆ ಸೀಮಿತವಾಗಿದ್ದರೆ, ದೀಪಾವಳಿ ಹಬ್ಬ ಐದು ದಿನಗಳು ಸಂಭ್ರಮದ ಸಡಗರದ ಹಬ್ಬ. ಮಿಕ್ಕೆಲ್ಲಾ ಹಬ್ಬಗಳಲ್ಲಿ ಧಾರ್ಮಿಕ ಆಚರಣೆಗಳಿಗೆ ಹೆಚ್ಚಿನ ಒತ್ತು ಕೊಟ್ಟರೆ ಇಲ್ಲಿ ಮಡಿ ಹುಡಿ, ಆಚಾರ ವಿಚಾರಗಳಿಗಿಂತಲೂ ಸಂಭ್ರಮಕ್ಕೇ ಪ್ರಥಮ ಆದ್ಯತೆ.

ದೀಪಾವಳಿ ಹಬ್ಬದಂದು ಮನೆಯ ತುಂಬ ಮತ್ತು ಸುತ್ತ ಮುತ್ತಾ ಹಣತೆಗಳನ್ನು ಹಚ್ಚಿ ಅದರ ನಗುವಿನಲ್ಲಿ ಎಲ್ಲರೂ ನಗುತ್ತಾ ಸಂಭ್ರಮಿಸುವುದಾಗಿದೆ. ದೀಪಯತಿ ಸ್ವಂ ಪರಚ ಇತಿ ದೀಪ: ಅಂದರೆ ತಾನು ಬೆಳಗಿ ಇತರರನ್ನು ಬೆಳಗಿಸುವ ಶಕ್ತಿ ಕೇವಲ ದೀಪಕ್ಕೆ ಮಾತ್ರವಿದೆ. ತಮಸೋಮಾ ಜ್ಯೋತಿರ್ಗಮಯ ಎಂಬ ಅರ್ಥದಂತೆ ಅಜ್ಞಾನದ ಕತ್ತಲೆಯಿಂದ ಜ್ಞಾನದ ದಿಕ್ಕಿಗೆ ನಮ್ಮನ್ನು ಕೊಂಡೊಯ್ಯುವುದೇ ದೀಪವಾಗಿದೆ. ಆಶ್ವಯುಜದ ಮಾಸದ ಕಡೇ ಮೂರು ದಿನಗಳು ಮತ್ತು ಕಾರ್ತಿಕ ಮಾಸದ ಆರಂಭದ ಎರಡು ದಿನಗಳ ಅದ್ದೂರಿಯ ಆಚರಣೆಯೇ ದೀಪಾವಳಿ.

### ಮೊದಲನೆಯ ದಿನ: ಆಶ್ವಯುಜ ಬಹುಳ ತ್ರಯೋದಶಿ, ನೀರು ತುಂಬುವ ಹಬ್ಬ

ದೀಪಾವಳಿ ಹಬ್ಬದ ಆರಂಭವಾಗುವುದೇ ಆಶ್ವಯುಜ ಮಾಸದ ಕೃಷ್ಣ ಪಕ್ಷದ ತ್ರಯೋದಶಿ ದಿನದಂದು. ಹಳೆ ಮೈಸೂರು ಭಾಗದಲ್ಲಿ ಇದನ್ನು ನೀರು ತುಂಬುವ ಹಬ್ಬ ಎನ್ನುತ್ತಾರೆ. ಈ ದಿನದಂದು ಮನೆಯ ಹೆಂಗಳೆಯರು ತಮ್ಮ ಸ್ನಾನಗೃಹಗಳಲ್ಲಿ ಇರುವ ಹಂಡೆ, ಕೊಳಗಗಳನ್ನು ಚೆನ್ನಾಗಿ ಶುಭ್ರಗೊಳಿಸಿ ಅದಕ್ಕೆ ಸುದ್ದೇ ಮತ್ತು ಕೆಮ್ಮಣ್ಣುಗಳಿಂದ ಅಲಂಕರಿಸಿದರೆ, ಗಂಡು ಮಕ್ಕಳು ಸ್ನಾನಗೃಹದಲ್ಲಿ ಇರುವ ಎಲ್ಲಾ ಪಾತ್ರೆಗಳಿಗೂ ನೀರು ತುಂಬಿಸಿಡುತ್ತಾರೆ. ಇಂದೆಲ್ಲಾ ಬಚ್ಚಲು ಮನೆಗಳಲ್ಲಿ ನೀರಿನ ಹಂಡೆಗಳೇ ಕಾಣೆಯಾಗಿರುವಾಗ, ಸಾಂಕೇತಿಕವಾಗಿ ಮನೆಯಲ್ಲಿ ಇರಬಹುದಾದ ಬಾಯ್ಲರ್ ಅಥವಾ ಗೀಜರ್ ಗಳಿಗೆ ಅಲಂಕಾರ ಮಾಡುತ್ತಾರೆ. ಈ ಮೂಲಕ ನಮ್ಮ ಎಲ್ಲಾ ಬಳಕೆಯ ವಸ್ತುಗಳನ್ನೂ ವರ್ಷಕ್ಕೊಮ್ಮೆಯಾದರೂ ಚೆನ್ನಾಗಿ ನೋಡಿಕೊಳ್ಳುವ ಭಾವನೆ/ಕಲ್ಪನೆಯನ್ನು ನಮ್ಮ ಹಿರಿಯರು ರೂಢಿಯಲ್ಲಿ ತಂದಿದ್ದಾರೆ.

ಇನ್ನು ಉತ್ತರದ ಭಾರತಾದ್ಯಂತ ಈ ದಿನವನ್ನು ಧನ್ವಂತರಿ ತ್ರಯೋದಶಿ ಅಥವಾ ಧನ್ ತೆರಸ್ ಎಂದು ಕರೆಯಲಾಗುತ್ತದೆ. ಈ ದಿನ ಗುರು ಧನ್ವಂತರಿಯವರ ಹುಟ್ಟಿದ ದಿನವಾಗಿರುವುದರಿಂದ ವಿಶೇಷವಾಗಿ ಸಮೃದ್ಧಿ ಮತ್ತು ಬುದ್ಧಿಯ ಪ್ರತೀಕವಾದ ಲಕ್ಷ್ಮೀ ಮತ್ತು ಗಣೇಶನನ್ನು ಪೂಜಿಸಿ ಹೊಸ ಬಟ್ಟೆ, ಪಾತ್ರೆ, ಬಂಗಾರ, ಬೆಳ್ಳಿಯನ್ನು ಖರೀದಿಸಿದರೆ, ಜೀವನ ಸುಖಮಯವಾಗಿರುತ್ತದೆ ಎಂಬ ನಂಬಿಕೆಯಿದೆ. ಇದೇ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ಅಂತರ್ಜಾಲದಲ್ಲಿ ಅನೇಕ ಕಂಪನಿಗಳು ಒಂದೆರಡು ವಾರಗಳ ಮುಂಚೆಯೇ ವಿಶೇಷ ಭಾರೀ ರಿಯಾಯಿತಿ ಮತ್ತು ಕೊಡುಗೆಗಳನ್ನು ನೀಡುವುದರ ಮೂಲಕ ತಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

### ಎರಡನೇ ದಿನ: ನರಕ ಚತುರ್ದಶಿ

ದೀಪಾವಳಿಯ ಎರಡನೇ ದಿನವಾದ ನರಕ ಚತುರ್ದಶಿಯಂದು, ಶ್ರೀಕೃಷ್ಣ ಪರಮಾತ್ಮ ನರಕಾಸುರನನ್ನು ವಧಿಸಿ, ಜಗತ್ತನ್ನು ಕಾಪಾಡಿದ ದಿನವೆಂದು ಆಚರಿಸಲಾಗುತ್ತದೆ. ಹಿಂದಿನ ದಿನ ಸಿಂಗಾರಗೊಂಡ ಹಂಡೆಗಳಿಗೆ ಬೆಳಗಿನ ಜಾವವೇ ಉರಿ ಹಾಕಿ ನೀರನ್ನು ಕೊತ ಕೊತನೆ ಕುದಿಸಿ ಮನೆಯಲ್ಲಿ ಆಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಚೆನ್ನಾಗಿ ಮೈತುಂಬಾ ಹರಳೆಣ್ಣೆ ಹಚ್ಚಿ ಕೆಲಕಾಲ ತಣಿಯಲು ಬಿಟ್ಟು ಸರದಿಯಂತೆ ಹದವಾಗಿ ಬೆರೆಸಿದ ಸೀಗೆಕಾಯಿ ಮತ್ತು ಚಿಗರೇ ಪುಡಿಯಿಂದ ಅಭ್ಯಂಜನ

ಮಾಡಿ ಬೆಳಗಿನ ಜಾವವೇ ಭಾರೀ ಶಬ್ಧಮಾಡುವ ಪಟಾಕಿಗಳನ್ನು ಮನೆಯ ಮುಂದೆ ಹೊಡೆಯುವುದರ ಮೂಲಕ ನೆರೆಹೊರೆಯವರೊಂದಿಗೆ ನರಕಾಸುರನನ್ನು ವಧಿಸಿ ಲೋಕವನ್ನು ಕಾಪಾಡಿದ ಶ್ರೀಕೃಷ್ಣನ ಸಾಹಸವನ್ನು ಕೊಂಡಾಡುತ್ತಾರೆ. ಇಂದಿನಿಂದ ಮನೆಯ ಮುಂದೆ ಮತ್ತು ಸುತ್ತ ಮುತ್ತ ಹಣತೆಗಳೊಂದಿಗೆ ದೀಪವನ್ನು ಬೆಳಗಿ ಬಂಧು ಮಿತ್ರರಿಗೆ ಉಡುಗೊರೆಗಳೊಂದಿಗೆ ಸಿಹಿಯನ್ನು ಹಂಚುತ್ತಾ ಸಂಭ್ರಮಿಸುತ್ತಾರೆ.

**ಮೂರನೇ ದಿನ: ಅಮಾವಾಸ್ಯೆ**

ಮೂರನೇಯ ದಿನವಾದ ಅಮಾವಾಸ್ಯೆಯಂದ ನಮ್ಮಲ್ಲಿ ಹೆಚ್ಚಿನ ಆಚರಣೆ ಇಲ್ಲ. ಪಿತೃ ಪಕ್ಷದಲ್ಲಿ ಪಿತೃತರ್ಪಣ ಕೊಡಲು ಸಾಧ್ಯವಾಗದಿದ್ದವರು ಈ ದಿನ ತಮ್ಮ ಪಿತೃಗಳಿಗೆ ತರ್ಪಣ ಕೊಟ್ಟು ತಮ್ಮ ಪಿತೃ ಋಣವನ್ನು ತೀರಿಸಿಕೊಳ್ಳುತ್ತಾರೆ. ಈ ದಿನ ಬಹುತೇಕರ ಮನೆಗಳಲ್ಲಿ ಕಜ್ಜಾಯವನ್ನು ಮಾಡಿ ದೇವರ ನೈವೇದ್ಯ ಮಾಡಿದರೆ, ಯಥಾ ಪ್ರಕಾರ ಮಕ್ಕಳು ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸುತ್ತಾರೆ.

ಈ ಅಮವಾಸ್ಯೆ ಉತ್ತರ ಭಾರತೀಯರು ಅದರಲ್ಲೂ ವ್ಯಾಪಾರಿಗಳಿಗೆ ಬಹಳ ವಿಶೇಷ. ಅಂದಿನ ರಾತ್ರಿ ಮನೆಯಲ್ಲಿನ ದರಿದ್ರ ಲಕ್ಷ್ಮಿಯನ್ನು ಹೊರಹಾಕುವ ಉದ್ದೇಶದಿಂದ ಲಕ್ಷ್ಮೀ ಪೂಜೆಯನ್ನು ಮಾಡಿ, ತಮ್ಮ ಮನೆಯಲ್ಲಿ ಹಾಗೂ ತಮ್ಮ ಅಂಗಡಿಗಳಲ್ಲಿ ಲಕ್ಷ್ಮಿಯ ವಿಗ್ರಹವನ್ನಿಟ್ಟು ಅದಕ್ಕೆ ತಮ್ಮಲ್ಲಿದ್ದ ಎಲ್ಲಾ ರೀತಿಯ ಆಭರಣಗಳು ಮತ್ತು ಧನಕನಕಾದಿಗಳಿಂದ ಸಿಂಗರಿಸಿ ಪೂಜಿಸಿ ಬಗೆ ಬಗೆಯ ಸಿಹಿ ತಿಂಡಿಗಳನ್ನು ಎಲ್ಲರಿಗೂ ಹಂಚಿ ಸಂಭ್ರಮಿಸುತ್ತಾರೆ. ಅನೇಕ ವ್ಯಾಪಾರಿಗಳು ತಮ್ಮ ವ್ಯವಹಾರದ ಲೆಕ್ಕ ಪತ್ರಗಳನ್ನು ಅಂದಿನಿಂದ ಪುನರಾರಂಭಿಸುವುದು ನಡೆದುಕೊಂಡು ಬಂದಿರುವುದು ವಾಡಿಕೆಯಾಗಿದೆ. ಇದೇ ದಿನ ಶ್ರೀ ಕೃಷ್ಣನು ದೇಹತ್ಯಾಗ ಮಾಡಿದ ದಿನವೆಂದೂ ಮತ್ತು ತನ್ನ ಪರಮ ಶಿಷ್ಯ ನಚೀಕೇತನಿಗೆ ಆತ್ಮ ಸಾಕ್ಷಾತ್ಕಾರವಾದ ದಿನವೆಂದೂ ಪ್ರತೀತಿಯಲ್ಲಿದೆ.

**ನಾಲ್ಕನೇ ದಿನ: ಬಲಿಪಾಡ್ಯಮಿ**

ದೀಪಾವಳಿಯ ನಾಲ್ಕನೇ ದಿನವೇ ಬಲಿಪಾಡ್ಯಮಿ. ಪುರಾಣದ ಪ್ರಕಾರ ರಾಕ್ಷಸರ ರಾಜ ಬಲಿಯ ಉಪಟಳವನ್ನು ತಾಳಾಲಾರದೆ, ಭಗವಾನ್ ವಿಷ್ಣು ಪುಟ್ಟ ವಾಮನಾವತಾರದಲ್ಲಿ ಬಂದು ಮೂರು ಹೆಜ್ಜೆಗಳಷ್ಟು ಜಾಗವನ್ನು ಬೇಡಿ, ವಾಮನ ಮೂರ್ತಿ ಬೃಹದಾಕಾರವಾಗಿ ಒಂದು ಹೆಜ್ಜೆಯನ್ನು ಇಡೀ ಭೂಮಂಡಲದ ಮೇಲೂ ಮತ್ತೊಂದನ್ನು ಆಕಾಶದ ಮೇಲೆ ಇಟ್ಟು ಮೂರನೇಯದನ್ನು ಎಲ್ಲಿ ಇಡಲಿ? ಎಂದು ಬಲಿ ಚಕ್ರವರ್ತಿಯನ್ನೇ ಕೇಳಿದಾಗ, ಈತ ಸಾಮಾನ್ಯ ಬಾಲಕನಲ್ಲ. ಸಾಕ್ಷಾತ್ ಭಗವಂತನೇ ಈ ರೂಪದಲ್ಲಿ ಬಂದಿರುವುದನ್ನು ಅರಿತು, ಭಗವಂತನ ಲೀಲೆಯ ಪ್ರಕಾರವೇ ಎಲ್ಲವೂ ನಡೆಯಲಿ ಎಂಬ ಇಚ್ಛೆಯಿಂದ, ಮೂರನೇ ಹೆಜ್ಜೆಯನ್ನು ತನ್ನ ತಲೆಯ ಮೇಲೆ ಇಡಲು ಕೋರಿಕೊಳ್ಳುತ್ತಾನೆ. ಆಗ ಬೃಹದಾಕಾರದ ವಾಮನ ಬಲಿ ತಲೆಯಮೇಲೆ ಪಾದವನ್ನಿಟ್ಟು ಬಲಿಯನ್ನು ಪಾತಾಳ ಲೋಕ್ಕಕ್ಕೆ ತಳ್ಳಿದ ದಿನವಿದು. ರಾಕ್ಷಸ ರಾಜನಾದರೂ ವಿಷ್ಣುವಿನ ಪರಮ ಭಕ್ತನಾಗಿದ್ದ ಕಾರಣ, ಕಾರ್ತಿಕ ಮಾಸದ ಮೊದಲ ದಿನದಂದು ಮಾತ್ರವೇ ಪಾತಾಳ ಲೋಕದಿಂದ ಬಲಿ ಭೂಲೋಕಕ್ಕೆ ಬಂದು ತನ್ನ ಪ್ರಜೆಗಳ ಸುಖಃ ದುಃಖಗಳನ್ನು ವಿಚಾರಿಸಿ ರಾಜ್ಯವನ್ನಾಳುವ ವರವನ್ನು ಭಗವಾನ್ ವಿಷ್ಣು ಬಲಿ ಚಕ್ರವರ್ತಿಗೆ ದಯಪಾಲಿಸುತ್ತಾರೆ. ಅದರ ಪ್ರಯುಕ್ತವೇ ಜನರು ದೀಪಾವಳಿಯ ನಾಲ್ಕನೇಯ ದಿನದಂದು ಬಲಿಚಕ್ರವರ್ತಿಯನ್ನು ಪೂಜಿಸಿ ಮನೆ ಮನೆಗಳಲ್ಲಿ ದೀಪದಿಂದ ಅಲಂಕರಿಸಿ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸುತ್ತಾರೆ.

ಹಳೆಯ ಮೈಸೂರಿನ ಬಹುತೇಕ ಮನೆಗಳಲ್ಲಿ ಅಂದು ಗೋವಿನ ಸಗಣಿಯಿಂದ ದೇವರ ಮನೆಯಲ್ಲಿ ಬಲೀಂದ್ರನ ಕೋಟೆ ಕಟ್ಟಿ, ಅದರ ಮೇಲೆ ಕುಂಬಳ ಹೂವು, ಇಲ್ಲವೇ ಚೆಂಡು ಹೂವು, ಅಥವಾ ಹುಚ್ಚೆಳ್ಳು ಹೂವು ಅದೂ ಇಲ್ಲದಿದ್ದಲ್ಲಿ ಕಾಸ್ಮಾಲ್ಸ ಹೂವು. ಒಟ್ಟಿನಲ್ಲಿ ಕೇಸರೀ ಬಣ್ಣದ ಯಾವುದಾದರೂ ಹೂವಿನ ಅಲಂಕಾರದ ಜೊತೆ ರಾಗಿ ತೆನೆಯನ್ನು ಸಗಣಿ ಕೋಟೆಯ ಸುತ್ತಲೂ ಇರಿಸಿ ಪೂಜೆಮಾಡುವುದು ಸಂಪ್ರದಾಯವಾಗಿದೆ. ಪುರಾಣದ ಪ್ರಕಾರ ಇದೇ ದಿನ ಶ್ರೀ ಕೃಷ್ಣನು ತನ್ನ ಕಿರು ಬೆರಳಿನಲ್ಲಿ ಗೋವರ್ಧನಗಿರಿಯನ್ನು ಎತ್ತಿದ್ದಾಗಿ ನಂಬಿರುವುದರಿಂದ, ಈ ದಿನ ಗೋವಿನ ಪೂಜೆ ಹಾಗೂ ಗೋವರ್ಧನನ ಪೂಜೆಗೆ ಹೆಚ್ಚಿನ ಮಹತ್ವವಿದ್ದು ಮನೆಗಳ್ಳಲ್ಲಿರುವ ದನಕರುಗಳಿಗೆ ಸ್ನಾನ ಮಾಡಿಸಿ, ಕೊಂಬಿಗೆ ಸೇವಂತಿಗೆ, ಚಂಡು ಹೂಗಳಿಂದ ಅಲಂಕರಿಸಿ ಪೂಜಿಸುವುದು ವಾಡಿಕೆ. ಹಲವಾರು ಕಡೆ ಎತ್ತುಗಳ ಮೆರವಣಿಗೆಯನ್ನೂ ಮಾಡುವ ಸಂಪ್ರದಾಯವಿದೆ.

**ಐದನೇ ದಿನ: ಸೋದರ ಬಿದಿಗೆ ಅಥವಾ ಬಾಯಿ ದೂಜ್**

ದೀಪಾವಳಿಯ ಐದನೇ ದಿನ ಕಾರ್ತೀಕ ದ್ವಿತೀಯ ಅಥವಾ ಸೋದರ ಬಿದಿಗೆ / ಭ್ರಾತೃದ್ವಿತೀಯಾ ಎಂದು ಆಚರಿಸಲಾಗುತ್ತದೆ. ಈ ದಿನ ಯಮ ತನ್ನ ತಂಗಿ ಯಮಿಯ ಮನೆಗೆ ಭೇಟಿ ಕೊಡುತ್ತಾನೆಂಬ ನಂಬಿಕೆ ಇರುವುದರಿಂದ, ಬಹುತೇಕ ಸಹೋದರರು ಎಲ್ಲೇ ಇದ್ದರೂ ಈ ದಿನ ತಮ್ಮ ಸಹೋದರಿಯರ ಮನೆಗೆ ಭೇಟಿ ನೀಡುತ್ತಾರೆ. ಹಾಗೆ ಮನೆಗೆ ಬಂದ ಸಹೋದರನಿಗೆ, ಸಹೋದರ ತಿಲಕವಿಟ್ಟು, ಸಿಹಿ ತಿನ್ನಿಸಿ, ಆರತಿ ಎತ್ತುವ ಸಂಪ್ರದಾಯವಿದೆ. ಇನ್ನು ಮಹಾರಾಷ್ಟ ಮತ್ತು ಅನೇಕ ಉತ್ತರ ಭಾರತದಲ್ಲಿ ಇದೇ ಹಬ್ಬವನ್ನು ಭಾಯಿ ದೂಜ್ ಎಂದು ಕರೆದು ಮೇಲೆ ತಿಳಿಸಿದಂತೆಯೇ ಸಹೋದರನನ್ನು ಸತ್ಕರಿಸುವ ಸಂಪ್ರದಾಯವಿದೆ.

ದೀಪಾವಳಿ ಹಬ್ಬದ ಎರಡನೇ ದಿನದಿಂದ ಆರಂಭಿಸಿ, ಕಾರ್ತಿಕ ಮಾಸವಿಡೀ ತಮ್ಮ ಮನೆಗಳ ಮುಂದೆ ದೀಪದ ಹಣತೆಗಳನ್ನು ಹಚ್ಚಿ ಇಡುತ್ತಾರೆ. ಈಗೆಲ್ಲಾ ಬಗೆ ಬಗೆಯ ವಿದ್ಯುತ್ ದೀಪಾಲಂಕಾರಗಳು, ದೀಪದ ಬುಟ್ಟಿಗಳನ್ನು ಹಚ್ಚಿ ಸಂಭ್ರಮಿಸುತ್ತಾರೆ.

ಈ ರೀತಿ ನಮ್ಮ ಪ್ರತಿಯೊಂದು ಹಬ್ಬ ಹರಿದಿನಗಳೂ ಜನರಿಗೆ ಹರ್ಷೋಲ್ಲಾಸದ ಜೊತೆ ತಮ್ಮೆಲ್ಲಾ ದುಃಖಗಳನ್ನು ಮರೆತು, ಕುಟುಂಬ ಹಾಗೂ ಬಂಧು ಬಾಂಧವರೊಂದಿಗೆ ಸಂಬಂಧ ಬೆಸೆಯುವುದಕ್ಕಾಗಿಯೇ ಆಚರಿಸಲಾಗುತ್ತದೆ. ಹಾಗಾಗಿ ನಾವುಗಳು ಈ ಸಂಸ್ಕೃತಿಯ ಸೊಬಗನ್ನು ಅರಿತು ಶ್ರದ್ಧಾಭಕ್ತಿಯಿಂದ ಆಚರಿಸಿದರೆ ಈ ಸಂಭ್ರಮ ಸಡಗರದ ಹಬ್ಬಗಳು ಅರ್ಥಪೂರ್ಣವೆನಿಸುತ್ತವೆ ಮತ್ತು ಸಂಭ್ರಮದ, ಸಡಗರದ ವಾತಾವರಣ ಮನಗಳಲ್ಲಿ ಮತ್ತು ಮನೆಗಳಲ್ಲಿ ಧನಾತ್ಮಕ ತರಂಗಗಳನ್ನು ಹೆಚ್ಚಿಸುತ್ತವೆ.

**ದೀಪದ ಬೆಳಕಿನಲ್ಲಿ ಕತ್ತಲು ದೂರ ಸರಿಯುವಂತೆ, ನಮ್ಮಲ್ಲಿರುವ ಕೋಪ., ಅಹಂ ದೂರವಾಗಲಿ, ಪ್ರೀತಿಯ ಬೆಳಕು ಹರಡಲಿ, ದೀಪಾವಳಿ ಹಬ್ಬದ ಶುಭಾಶಯಗಳು.**

# ಪ್ರತಿ ಕನ್ನಡಿಗನ, ಕರುನಾಡಿನ ಹೆಮ್ಮೆಯ ಕನ್ನಡ ರಾಜೋತ್ಸವ

– ಶ್ರೀ ಎಸ್.ಎಮ್ ಬಿರಾದಾರ, ಕರಾಸೌಸಂಸನಿ., ಬೆಂಗಳೂರು



ನವೆಂಬರ್ 1ರಂದು ರಾಜ್ಯದಾದ್ಯಂತ 69ನೇ ಕನ್ನಡ ರಾಜ್ಯೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಣೆ ಮಾಡಲಾಗುತ್ತದೆ. ಪ್ರತಿ ಕನ್ನಡಿಗನ, ಕರುನಾಡಿನ ಹೆಮ್ಮೆಯ ಕನ್ನಡ ರಾಜೋತ್ಸವ. ಕರ್ನಾಟಕವು ಮೊದಲು ಮೈಸೂರು ಪ್ರಾಂತ್ಯವಾಗಿತ್ತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಅಂದಿನ ಮೈಸೂರು ಮಹಾರಾಜರಾಗಿದ್ದ ಒಡೆಯರ್ ಅವರು ತಮ್ಮ ರಾಜ್ಯವನ್ನು ಭಾರತ ದೇಶದೊಂದಿಗೆ ವಿಲೀನ ಮಾಡಲು ಒಪ್ಪಿದರು. ಹೀಗಾಗಿ ಮೈಸೂರು 1950ರಲ್ಲಿ ಭಾರತದ ಒಂದು ರಾಜ್ಯವಾಯಿತು.

ಕರ್ನಾಟಕ ಹುಟ್ಟಿಗೆ ಆಲೂರು ವೆಂಕಟರಾವ್ ಅವರು ಮೊದಲಿಗೆ ಕರ್ನಾಟಕ ಏಕೀಕರಣ ಚಳುವಳಿಯನ್ನು ಸ್ವಾತಂತ್ರ್ಯ ಪೂರ್ವವೇ 1905ರಲ್ಲಿ ಆರಂಭಿಸಿದರು. ನಂತರ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಗಣರಾಜ್ಯವಾದ ನಂತರ ಭಾಷೆಗಳ ಆಧಾರದ ಮೇಲೆ 1956ರ ನವೆಂಬರ್ 01ರಂದು ರಾಜ್ಯಗಳನ್ನು ವಿಂಗಡಿಸಿದರು. ದಕ್ಷಿಣ ಭಾರತದಲ್ಲಿ ಹರಡಿದ್ದ ಕನ್ನಡ ಭಾಷಿಕರ ಎಲ್ಲ ಪ್ರದೇಶಗಳನ್ನು ಒಗ್ಗೂಡಿಸಿ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಭಾರತ ದೇಶದಲ್ಲಿ ರಾಜ್ಯಗಳ ವಿಲೀನಿಕರಣ ಪ್ರಕ್ರಿಯೆಯು 19ನೇ ಶತಮಾನದ ಮಧ್ಯಭಾಗದಲ್ಲಿ ಆರಂಭಗೊಂಡಿತು. ನಂತರ 1956ರಲ್ಲಿ ರಾಜ್ಯವು ಪುರ್ನವಿಂಗಡನಾ ಕಾಯ್ದೆಯ ಜಾರಿಯೊಂದಿಗೆ ಈ ಪ್ರಕ್ರಿಯೆ ಮುಕ್ತಾಯವಾಯಿತು. ಕೂರ್ಗ್, ಮದರಾಸು, ಹೈದರಾಬಾದ್ ಮತ್ತು ಬಾಂಬೆ ಸಂಸ್ಥಾನದ ಕೆಲ ಪ್ರದೇಶಗಳು ಈ ಪ್ರಕ್ರಿಯೆಯಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟವು.

ಉತ್ತರ ಕರ್ನಾಟಕದ ಜನರು ಮೈಸೂರು ಹೆಸರನ್ನು ಉಳಿಸಿಕೊಳ್ಳಲು ಒಲವು ತೋರಲಿಲ್ಲ. ಏಕೆಂದರೆ ಇದು ಹಿಂದಿನ ಸಂಸ್ಥಾನದ ಮತ್ತು ಹೊಸ ರಾಜ್ಯದ ದಕ್ಷಿಣ ಪ್ರದೇಶಗಳೊಂದಿಗೆ ನಿಕಟ ಸಂಬಂಧ ಹೊಂದಿತ್ತು. ಈ ತರ್ಕಕ್ಕೆ ಅನುಗುಣವಾಗಿ, ರಾಜ್ಯದ ಹೆಸರನ್ನು ಕರ್ನಾಟಕ ಎಂದು ನವೆಂಬರ್ 1ರಂದು 1973ರಲ್ಲಿ ಬದಲಾಯಿಸಲಾಯಿತು. ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಾಗ ದೇವರಾಜ್ ಅರಸು ರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

### ಕರ್ನಾಟಕ ಹೆಸರು ಬಂದಿದ್ದು ಹೇಗೆ?

ಕರ್ನಾಟಕ ಪದದ ಮೂಲ ಸಂಸ್ಕೃತ. ಸಂಸ್ಕೃತದ ಕನ್ನಡ ಎಂಬ ಪದದಿಂದ ಕರ್ನಾಟಕ ಹುಟ್ಟಿದೆ. ಕನ್ನಡಿಗರ ನಾಡು, ಕನ್ನಾಡು, ಕನ್ನಡ ನಾಡು ಎಂಬುದು ಇದರ ಅರ್ಥ. ಆದರೆ ಕರ್ನಾಟಕ ಎಂಬ ಪದದ ಹುಟ್ಟು ಅಥವಾ ಅರ್ಥದ ಬಗ್ಗೆ ಇನ್ನೂ ಹಲವು ಅಭಿಪ್ರಾಯಗಳು ಇವೆ. ಕರು+ನಾಡು=ಕರುನಾಡು ಎಂಬ ಪದವು ಕರ್ನಾಟಕವಾಯಿತು ಎನ್ನಲಾಗುತ್ತದೆ. ಕರು ಎಂದರೆ ಕಪ್ಪು, ಇದರರ್ಥ ಕಪ್ಪು ಮಣ್ಣಿನ ನಾಡು ಎಂದೂ ಸಹ ಹೇಳಲಾಗುತ್ತದೆ. ಹಳೆಯ ಗ್ರಂಥಗಳು ಇದನ್ನು ಕರ್ನಾಟ ಎಂಬ ಪದದಿಂದ ಪಡೆಯಲಾಗಿದೆ ಎಂದು ಸೂಚಿಸುತ್ತವೆ.

### ಹಳದಿ–ಕೆಂಪು ಬಾವುಟ

ಕರ್ನಾಟಕ ರಾಜ್ಯವು ತನ್ನದೆ ಆದ ಬಾವುಟವನ್ನು ಹೊಂದಿದೆ. ಹಳದಿ–ಕೆಂಪು ಬಣ್ಣದ ಸಾಂಸ್ಕೃತಿಕ ಬಾವುಟವನ್ನು ಹೊಂದಿದೆ. ಕನ್ನಡ ಹೋರಾಟಗಾರ ಎಂ. ರಾಮಮೂರ್ತಿಯವರು ಈ ಹಳದಿ–ಕೆಂಪು ಬಾವುಟವನ್ನು ಪ್ರಥಮ ಬಾರಿಗೆ ತಯಾರಿಸಿ, ಬಳಸಿದ್ದರು.

ರಾಜ್ಯದ ಸಾಂಸ್ಕೃತಿಕ ಮತ್ತು ಭಾಷಾ ಐಕ್ಯತೆಯನ್ನು ಪ್ರತಿಬಿಂಬಿಸಲು ಪ್ರತಿವರ್ಷ ನವೆಂಬರ್ 1ರಂದು ರಾಜ್ಯದ ಎಲ್ಲಾ ಭಾಗಗಳಲ್ಲಿ ಕನ್ನಡ ನಾಡು, ಕನ್ನಡ ನುಡಿ, ಕನ್ನಡ ಸಂಸ್ಕೃತಿ ಕುರಿತಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಪ್ರತಿಷ್ಠಾಪನೆಯ ಅಂಗವಾಗಿ ಕನ್ನಡ ಧ್ವಜವನ್ನು ಧ್ವಜಾರೋಹಣ ಮಾಡಲಾಗುತ್ತದೆ. ನಾಟಕ, ನೃತ್ಯ, ಸಂಗೀತ, ಕವಿತೆ ಓದುವಿಕೆ ಮತ್ತು ವಿವಿಧ ಕಲೆಗಳ ವಿಶೇಷ ಪ್ರದರ್ಶನಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಕಲೆಗಳಿಗೆ ವಿಶಿಷ್ಟ ಮಾನ್ಯತೆಯನ್ನು ನೀಡುವುದರ ಜೊತೆಗೆ ಕನ್ನಡ ದೀಕ್ಷಿತರು, ಲೇಖಕರು, ಕವಿ ಮತ್ತು ಕಲಾವಿದರನ್ನು ಗುರುತಿಸಿ ಅವರ ಸಾಧನೆಗಳನ್ನು ಗೌರವಿಸಲಾಗುತ್ತದೆ.

ಕನ್ನಡ ರಾಜೋತ್ಸವ ಕನ್ನಡಿಗರು ತಮ್ಮ ಕಲ್ಪನೆಗಳನ್ನು ಹಂಚಿಕೊಳ್ಳಲು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೆಮ್ಮೆಪಡುವ ದಿನವಾಗಿದೆ. ಇದು ಕನ್ನಡಿಗರ ಗುರುತ್ವ ಮತ್ತು ಪರಂಪರೆಯನ್ನು ಗೌರವಿಸುವುದರ ಜೊತೆಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಶ್ರೇಷ್ಠತೆಯನ್ನು ಉಂಟು ಮಾಡುತ್ತದೆ.

# "ಸಾಮಾನ್ಯ ಸೇವಾ ಕೇಂದ್ರ" Common Service Center (CSC) ಗ್ರಾಮೀಣ ಭಾಗಕ್ಕೂ ಡಿಜಿಟಲ್ ಸೇವೆಗಳ ಸೌಲಭ್ಯ

– ಶ್ರೀ ಶಿವಕುಮಾರ ಬಿರಾದಾರ, ತರಬೇತಿ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು




ಸಾಮಾನ್ಯ ಸೇವಾ ಕೇಂದ್ರಗಳನ್ನು (CSC) ಭಾರತದಲ್ಲಿ 2006ರಲ್ಲಿ ಕೇಂದ್ರ ಸರ್ಕಾರವು ಪ್ರಾರಂಭಿಸಿತು. ಇದನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ಮತ್ತು ಕೇಂದ್ರ ಸರ್ಕಾರದ ಇತರೆ ಸಂಸ್ಥೆಗಳ ಸಹಯೋಗದಿಂದ ಅಭಿವೃದ್ಧಿ ಮಾಡಲಾಯಿತು. ದೇಶದ ಗ್ರಾಮೀಣ ಭಾಗದಲ್ಲಿ ವಿವಿಧ ಡಿಜಿಟಲ್ ಸೇವೆಗಳನ್ನು ತರುವಲ್ಲಿ ಸಾಮಾನ್ಯ ಸೇವಾ ಕೇಂದ್ರಗಳು (CSC) ಪ್ರಮುಖ ಅಂಶವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಮೂಲಕ ನಾಗರಿಕರಿಗೆ ಸೇವೆಗಳನ್ನು ಒದಗಿಸಲು ಕೇಂದ್ರೀಕೃತ ಚೌಕಟ್ಟು ಒದಗಿಸಲಾಗಿದೆ. CSC ಯೋಜನೆ ಎಂದರೇನು? ಇದರಲ್ಲಿ ಸಿಗುವ ಸೌಲಭ್ಯಗಳೇನು? ಈ ಕುರಿತ ಪೂರ್ಣ ವಿವರ ಇಲ್ಲಿದೆ.

**ಪ್ರಮುಖ ಅಂಶಗಳು:**

- ಉತ್ತಮ ಆಡಳಿತ ನೀಡುವ ಸಲುವಾಗಿ "ಸಾಮಾನ್ಯ ಸೇವಾ ಕೇಂದ್ರ" ಗಳ ಪರಿಚಯ
- ಗ್ರಾಮೀಣ ಭಾಗಕ್ಕೂ ಡಿಜಿಟಲ್ ಸೇವೆ ಒದಗಿಸುವ ಕೇಂದ್ರಗಳು
- ಸಾಮಾನ್ಯ ಸೇವಾ ಕೇಂದ್ರ ಆರಂಭಿಸುವುದು ಹೇಗೆ? ಇಲ್ಲಿದೆ ಮಾಹಿತಿ

ಉತ್ತಮ ಆಡಳಿತ ನೀಡುವ ಸಲುವಾಗಿ ಡಿಜಿಟಲ್ ಸೇವಾ ಕೇಂದ್ರ ಅಥವಾ "ಸಾಮಾನ್ಯ ಸೇವಾ ಕೇಂದ್ರ" ಯೋಜನೆಯನ್ನು ಪರಿಚಯಿಸಲಾಗಿದೆ. ಕಾಮನ್ ಸರ್ವೀಸ್ ಸೆಂಟರ್‌ಗಳಿಂದ (CSC) ಎರಡು ರೀತಿಯ ಅನುಕೂಲಗಳಿವೆ. ಇದು ಸಾರ್ವಜನಿಕ ಸೇವೆಗಳ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಸಹಾಯ ಮಾಡುತ್ತದೆ. ಅದೇ ಸಮಯದಲ್ಲಿ ಇದು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಸಾಮಾನ್ಯ ಸೇವಾ ಕೇಂದ್ರ (Common Service Center-CSC) ಯೋಜನೆಯನ್ನು ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಅನುಷ್ಠಾನ ಮಾಡುತ್ತಿದೆ.

**ಏನಿದು CSC ಡಿಜಿಟಲ್ ಸೇವಾ ಪೋರ್ಟಲ್?**

ಸರ್ಕಾರಿ ಯೋಜನೆಗಳನ್ನು ಡಿಜಿಟಲೀಕರಣಗೊಳಿಸುವ ಉದ್ದೇಶದೊಂದಿಗೆ ಸಾಮಾನ್ಯ ಸೇವಾ ಕೇಂದ್ರಗಳನ್ನು (CSC) ರಚಿಸಲಾಗಿದೆ. ಇದರಿಂದ ಸರ್ಕಾರಿ ಯೋಜನೆಗಳ ಪ್ರಕ್ರಿಯೆಯನ್ನು ನಾಗರಿಕರಿಗೆ ಸರಳ ಮತ್ತು ಸುಲಭಗೊಳಿಸಬಹುದು. ಸರ್ಟಿಫಿಕೇಟ್‌ಗಳು, ಪರವಾನಗಿಗಳು, ಆಧಾರ್ ಕಾರ್ಡ್, ಪಾಸ್ ಪೋರ್ಟ್, ಪಿಂಚಣಿ ಸೇವೆಗಳು, ಬ್ಯಾಂಕಿಂಗ್‌ನಂತಹ ಅನೇಕ ಸರ್ಕಾರಿ ಸೇವೆಗಳನ್ನು ಸಿಎಸ್‌ಇ ಕೇಂದ್ರದ ಮೂಲಕ ಸುಲಭವಾಗಿ ಪಡೆಯಬಹುದು. "ಗ್ರಾಮ ಮಟ್ಟದ ಉದ್ಯಮಿಗಳಿಗೆ (VLE CSC)" ಗ್ರಾಮೀಣ ಡಿಜಿಟಲ್ ಸೇವಾ ಕೇಂದ್ರವನ್ನು ನಡೆಸುವ ಅವಕಾಶ ನೀಡಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಸಿಎಸ್‌ಸಿ ಕೇಂದ್ರ ತೆರೆಯುವುದು ಈ ಯೋಜನೆಯ ಉದ್ದೇಶವಾಗಿದೆ.

**ಡಿಜಿಟಲ್ ಸೇವಾ ಕೇಂದ್ರದ ಉದ್ದೇಶಗಳು:**

- CSC ಡಿಜಿಟಲ್ ಸೇವಾ ಪೋರ್ಟಲ್ ಮೂಲಕ ಪಾರದರ್ಶಕ ರೀತಿಯಲ್ಲಿ ನಾಗರಿಕರಿಗೆ ವಿವಿಧ ಸೇವೆಗಳನ್ನು ತಲುಪಿಸಲು ಕೇಂದ್ರೀಕೃತ ವೇದಿಕೆ ಒದಗಿಸುವುದು.
- ಗ್ರಾಮೀಣ ನಾಗರಿಕರಿಗೆ ಜಿ–ಟು–ಸಿ (ಸರ್ಕಾರದಿಂದ ನಾಗರಿಕರಿಗೆ) ಮತ್ತು ಬಿ–ಟು–ಸಿ (ವ್ಯವಹಾರದಿಂದ ನಾಗರಿಕರಿಗೆ) ಸೇವೆಗಳ ವಿತರಣೆಯ ವ್ಯಾಪ್ತಿಯನ್ನು ವಿಸ್ತರಿಸುವುದು.
- ಸಾಮಾನ್ಯ ಸೇವಾ ಕೇಂದ್ರವು ಸಮಾಜದ ಗ್ರಾಮೀಣ ಸಬಲೀಕರಣ–ಕ್ಕಾಗಿ ಸಾಮೂಹಿಕ ಕ್ರಿಯೆಯನ್ನು ಉತ್ತೇಜಿಸುವುದು ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುವುದು.
- ಯೋಜನಾ ನಿರ್ವಹಣೆಗಾಗಿ ಸಾಂಸ್ಥಿಕ ಚೌಕಟ್ಟನ್ನು ಹೆಚ್ಚಿಸಲು, ರಾಜ್ಯ ಮತ್ತು ಜಿಲ್ಲಾ ಆಡಳಿತ ಯಂತ್ರವನ್ನು ಬೆಂಬಲಿಸಲು ಮತ್ತು ಸ್ಥಳೀಯ ಭಾಷಾ ಸಹಾಯ ಕೇಂದ್ರಗಳ ಮೂಲಕ ಗ್ರಾಮ ಮಟ್ಟದ ಉದ್ಯಮಿಗಳನ್ನು (VLEs) ಸಂಪರ್ಕಿಸಲು ಈ ಯೋಜನೆ ಸಹಾಯಕವಾಗಿದೆ.
- CSC ಕೇಂದ್ರಗಳಲ್ಲಿ ಗ್ರಾಮ ಮಟ್ಟದ ಉದ್ಯಮಿಗಳ (VLE) ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಮತ್ತು VLE ಗಳಾಗಿ ಸೇರಲು ಮಹಿಳೆಯರನ್ನು ಪ್ರೋತ್ಸಾಹಿಸುವುದು.
- ನಾಗರಿಕರಿಗೆ ಅನನುಕೂಲವಾಗದಂತೆ ಸಿಎಸ್‌ಸಿಗಳಲ್ಲಿ ಸೇವೆಯ ವಿತರಣೆಯನ್ನು ಜವಾಬ್ದಾರಿಯುತ, ಪಾರದರ್ಶಕ ಮತ್ತು ಪರಿಣಾಮಕಾರಿಯನ್ನಾಗಿಸುವುದು.

**CSC ಡಿಜಿಟಲ್ ಸೇವಾ ಪೋರ್ಟಲ್‌ನಲ್ಲಿ ಒದಗಿಸಲಾಗುವ ಸೌಲಭ್ಯಗಳು:**

CSC ಡಿಜಿಟಲ್ ಸೇವಾ ಪೋರ್ಟಲ್‌ನಲ್ಲಿನ ಸೇವೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

**1. ಸರ್ಕಾರದಿಂದ ನಾಗರಿಕರಿಗೆ ಸೇವೆಗಳು:**

ನಿಮಗೆ ತಿಳಿದಿರುವಂತೆ, ಕಾಲಕಾಲಕ್ಕೆ, ಸರ್ಕಾರವು ನಾಗರಿಕರಿಗಾಗಿ ಹಲವು ಯೋಜನೆಗಳನ್ನು ತರುತ್ತಲೇ ಇರುತ್ತದೆ. ಈ ಯೋಜನೆಗಳ

ಪ್ರಯೋಜನ ದೇಶದ ಎಲ್ಲ ಅರ್ಹ ಫಲಾನುಭವಿಗೂ ತಲುಪಿಸಲು, ಸರ್ಕಾರವು ಈ ಅಖಿಲ ಡಿಜಿಟಲ್ ಸೇವೆಗಳ ಸಹಾಯ ತೆಗೆದುಕೊಳ್ಳುತ್ತಿದೆ. ವಸತಿ ಯೋಜನೆ, ಫಾಸ್ಟ್ ಟ್ಯಾಗ್, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್, ಆಧಾರ್ ಕಾರ್ಡ್, ವಿಮೆ, ವಿದ್ಯುತ್ ಬಿಲ್, ನೀರಿನ ಬಿಲ್ ಇತ್ಯಾದಿ ಸೇವೆಗಳು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಲಭ್ಯವಿದೆ.

### 2. ಉದ್ದಿಮೆಗಳಿಂದ ನಾಗರಿಕರಿಗೆ ಸೇವೆಗಳು:

ಇವು ಖಾಸಗಿ ವಲಯದಿಂದ ನಡೆಸಲ್ಪಡುತ್ತಿರುವ ಸೇವೆಗಳಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಅವುಗಳ ವಿಸ್ತರಣೆಗೆ ಸಿಎಸ್‌ಸಿ ಕೇಂದ್ರದ ಸಹಕಾರ ತೆಗೆದುಕೊಳ್ಳಲಾಗುತ್ತಿದೆ. ಈ ಸೇವೆಗಳಾದ IRCTC, ವಿಮಾನ ಟಿಕೆಟ್ ಬುಕಿಂಗ್, ಬಸ್ ಟಿಕೆಟ್ ಬುಕಿಂಗ್ ಸೇವೆಗಳು, ಮೊಬೈಲ್ ಮತ್ತು ಆಖಿಲಾ ರೀಚಾರ್ಜ್, ಕೃಷಿ ಸೇವೆಗಳು, CSC ಬಜಾರ್, ಇ–ಲರ್ನಿಂಗ್ ಮೊದಲಾದ ಸೇವೆಗಳು ಸಿಎಸ್‌ಸಿ ಕೇಂದ್ರಗಳಲ್ಲಿ ಲಭ್ಯವಿದೆ.

### 3. ಹಣಕಾಸು ಸೇವೆಗಳು:

ಠೇವಣಿ, ಹಿಂಪಡೆಯುವಿಕೆ, ಬ್ಯಾಲೆನ್ಸ್ ವಿಚಾರಣೆ, ಅಕೌಂಟ್ ಸ್ಟೇಟ್‌ಮೆಂಟ್, ಮರುಕಳಿಸುವ ಠೇವಣಿ ಖಾತೆಗಳು, ಓವರ್‌ಡ್ರಾಫ್ಟ್, ಚಿಲ್ಲರೆ ಸಾಲ, ಸಾಮಾನ್ಯ ಉದ್ದೇಶದ ಕ್ರೆಡಿಟ್ ಕಾರ್ಡ್, ಕಿಸಾನ್ ಕ್ರೆಡಿಟ್ ಕಾರ್ಡ್, ಕ್ರೆಡಿಟ್ ಸೌಲಭ್ಯದಂತಹ ಅನೇಕ ಬ್ಯಾಂಕಿಂಗ್ ಸೇವೆಗಳು ಗ್ರಾಮೀಣ ಪ್ರದೇಶಗಳಲ್ಲಿ ಸಿಎಸ್‌ಸಿ ಮೂಲಕ ಲಭ್ಯವಾಗಲಿವೆ. ಇದು ಸುಮಾರು 42 ಸಾರ್ವಜನಿಕ, ಖಾಸಗಿ ಸೇವಾ ವಲಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ.

CSC ಸೇವಾ ಅಧಿಕೃತ ಗ್ರಾಮ ಮಟ್ಟದ ವಾಣಿಜ್ಯೋದ್ಯಮಿ (VLE) ಅಥವಾ ಗ್ರಾಮೀಣ ಡಿಜಿಟಲ್ ಸೇವಾ ಕೇಂದ್ರದ ಮೂಲಕವೂ ವಿಮಾ ಸೇವೆ ಪಡೆಯಬಹುದು. ಜೀವ ವಿಮೆ, ಆರೋಗ್ಯ ವಿಮೆ, ಬೆಳೆ ವಿಮೆ, ವೈಯಕ್ತಿಕ ಅಪಘಾತ ಮತ್ತು ಮೋಟಾರು ವಿಮೆಯಂತಹ ಸೇವೆಗಳನ್ನು ಸಿಎಸ್‌ಸಿ ಕೇಂದ್ರಗಳಲ್ಲಿ ಪಡೆಯಬಹುದು.

### ಇತರೆ ಸೇವೆಗಳು:

- ಶೈಕ್ಷಣಿಕ ಸೇವೆಗಳು
- ಆರೋಗ್ಯ ಸೇವೆಗಳು
- ಆದಾಯ ತೆರಿಗೆ ಸಲ್ಲಿಕೆ
- ಕೃಷಿ ಸೇವೆಗಳು

### CSC ಡಿಜಿಟಲ್ ಸೇವಾ ಪಾಲುದಾರರು:

ಸಾಮಾನ್ಯ ಸೇವಾ ಕೇಂದ್ರದ ಚೌಕಟ್ಟನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

### 1) ಗ್ರಾಮ ಮಟ್ಟದ ಉದ್ಯಮಿಗಳು:

ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲ್ ಸೇವೆ ಒದಗಿಸಲು, ಗ್ರಾಮೀಣ ಮಟ್ಟದ ಉದ್ಯಮಿಗಳಿಗೆ ಈ ಅಖಿಲ ಡಿಜಿಟಲ್ ಸೇವಾ ಕೇಂದ್ರವನ್ನು ತೆರೆಯುವ ಅವಕಾಶ ನೀಡಲಾಗಿದೆ.

### 2) ರಾಜ್ಯ ಗೊತ್ತುಪಡಿಸಿದ ಸಂಸ್ಥೆ:

ರಾಜ್ಯದೊಳಗೆ ಯೋಜನೆಯ ವಿಸ್ತರಣೆಗಾಗಿ ಕೆಲಸ ಮಾಡುವ ರಾಜ್ಯ ಗೊತ್ತುಪಡಿಸಿದ ಸಂಸ್ಥೆ.

### 3) ಕೇಂದ್ರ ಸಚಿವಾಲಯಗಳು ಮತ್ತು ಬ್ಯಾಂಕುಗಳು:

ಕೇಂದ್ರ ಸಚಿವಾಲಯಗಳು, ಅವರ ಇಲಾಖೆಗಳು ಮತ್ತು ಇತರ ಕೇಂದ್ರ ಏಜೆನ್ಸಿಗಳು ನಾಗರಿಕರಿಗೆ ವಿವಿಧ ಸೇವೆಗಳನ್ನು ಒದಗಿಸುತ್ತವೆ. ಸಾರ್ವಜನಿಕ, ಖಾಸಗಿ ವಲಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ವಿವಿಧ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳನ್ನು ಒದಗಿಸಲು ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು CSC ಕೇಂದ್ರವನ್ನು ಸಕ್ರಿಯಗೊಳಿಸುತ್ತವೆ.

### ಡಿಜಿಟಲ್ ಸೇವಾ ಕೇಂದ್ರ ನೋಂದಣಿ ಹೇಗೆ?

ಗ್ರಾಮೀಣ ಜನರು CSC ಡಿಜಿಟಲ್ ಸೇವಾ ಕೇಂದ್ರವನ್ನು ತೆರೆಯಲು ಬಯಸಿದರೆ ಅವರು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬೇಕು. ನಗರ ಅಥವಾ ಗ್ರಾಮೀಣ ಪ್ರದೇಶದಲ್ಲಿ ಯಾವ ರಾಜ್ಯದಲ್ಲಿ ಸಿಎಸ್‌ಸಿ ತೆರೆಯಲು ಬಯಸುತ್ತಾರೆ ಎಂಬುದನ್ನು ತಿಳಿಸಬೇಕು. ಗ್ರಾಮೀಣ ಉದ್ಯಮಿಗಳು ಡಿಜಿಟಲ್ ಇಂಡಿಯಾ ಯೋಜನೆಯಡಿ ಸಾಮಾನ್ಯ ಸೇವಾ ಕೇಂದ್ರಗಳನ್ನು ತೆರೆಯಬಹುದು ಮತ್ತು ಸ್ಥಳೀಯ ನಾಗರಿಕರಿಗೆ ಮೇಲೆ ತಿಳಿಸಿದ ಸೇವೆಗಳನ್ನು ಒದಗಿಸಬಹುದು. CSC ಡಿಜಿಟಲ್ ಸೇವಾ ಪೋರ್ಟಲ್‌ನಲ್ಲಿ CSC ಡಿಜಿಟಲ್ ಸೇವಾ ಕೇಂದ್ರದ ನೋಂದಣಿ ಮಾಡಬಹುದು. ಇದಕ್ಕೆ ಯಾವುದೇ ಶುಲ್ಕ ಪಾವತಿಸಬೇಕಿಲ್ಲ.

### CSC ಡಿಜಿಟಲ್ ಸೇವಾ ಕೇಂದ್ರ ತೆರೆಯಲು ಅರ್ಹತೆ:

- ಡಿಜಿಟಲ್ ಸೇವಾ CSC ಕೇಂದ್ರವನ್ನು ತೆರೆಯಲು ಅರ್ಜಿದಾರರು ಹದಿನೆಂಟು ವರ್ಷಕ್ಕಿಂತ ಮೇಲ್ಪಟ್ಟವರಾಗಿರಬೇಕು.
- ಅರ್ಜಿದಾರರು ಮಾನ್ಯತೆ ಪಡೆದ ಮಂಡಳಿಯಿಂದ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಸಾಮಾನ್ಯ ಸೇವಾ ಕೇಂದ್ರದಲ್ಲಿ, ಅರ್ಜಿದಾರರು ಸ್ಥಳೀಯ ಉಪಭಾಷೆಯನ್ನು ಓದಲು ಮತ್ತು ಬರೆಯಲು ಬರಬೇಕು. ಜತೆಗೆ ಇಂಗ್ಲಿಷ್ ಭಾಷೆಯ ಜ್ಞಾನ ಹೊಂದಿರಬೇಕು.
- ಅರ್ಜಿದಾರರು ಕಂಪ್ಯೂಟರ್ ಜ್ಞಾನ ಹೊಂದಿರಬೇಕು.
- CSC ಡಿಜಿಟಲ್ ಸೇವೆಯಲ್ಲಿ ನೋಂದಣಿಗಾಗಿ ಟಿಇಸಿ ಸರ್ಟಿಫಿಕೇಟ್ ಸಂಖ್ಯೆಯನ್ನು ಕಡ್ಡಾಯಗೊಳಿಸಲಾಗಿದೆ, ಆದ್ದರಿಂದ ನೀವು ಡಿಜಿಟಲ್ ಸೇವಾ ಕೇಂದ್ರಕ್ಕೆ ನೋಂದಾಯಿಸುವ ಮೊದಲು ಈ TEC ಕೋರ್ಸ್ ಸರ್ಟಿಫಿಕೇಟ್ ಪಡೆಯಬೇಕು.

### CSC ಡಿಜಿಟಲ್ ಸೇವಾ ಕೇಂದ್ರ ನೋಂದಣಿಗೆ ಅಗತ್ಯ ದಾಖಲೆಗಳು:

- ಗುರುತಿನ ಪುರಾವೆ: ಅರ್ಜಿದಾರರ ಮತದಾರರ ಗುರುತಿನ ಚೀಟಿಯ ಪ್ರತಿ.
- ವಿಳಾಸ ಪುರಾವೆ: ಅರ್ಜಿದಾರರ ಆಧಾರ್ ಕಾರ್ಡ್ ನಕಲು.
- ಬ್ಯಾಂಕ್ ವಿವರಗಳು: ಅರ್ಜಿದಾರರ ಬ್ಯಾಂಕ್ ಪಾಸ್‌ಬುಕ್ ಅಥವಾ ರದ್ದುಪಡಿಸಿದ ಚೆಕ್
- ಪ್ಯಾನ್ ಕಾರ್ಡ್: ಅರ್ಜಿದಾರರ ಪ್ಯಾನ್ ಕಾರ್ಡ್ ನಕಲು
- ಪುನರಾರಂಭ: ಅರ್ಜಿದಾರರ ಪುನರಾರಂಭದ ಪ್ರತಿ
- ಸಾಮಾನ್ಯ ಸೇವಾ ಕೇಂದ್ರ ಮೂಲಸೌಕರ್ಯ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

- 100 ರಿಂದ 150 ಚದರ ಅಡಿ ಕೇಂದ್ರ ತೆರೆಯುವ ಸ್ಥಳ
- ಹೊಸ ತಂತ್ರಜ್ಞಾನದ ಕಂಪ್ಯೂಟರ್
- ಮುದ್ರಕ
- ಸ್ಕ್ಯಾನರ್
- ವೆಬ್ ಕ್ಯಾಮರಾ
- ಬಯೋ-ಮ್ಯಾಟ್ರಿಕ್ಸ್ ಸ್ಕ್ಯಾನರ್
- ಯುಪಿಎಸ್ ಪವರ್ ಬ್ಯಾಕಪ್

### ಸಾಮಾನ್ಯ ಸೇವಾ ಕೇಂದ್ರಗಳನ್ನು ಯಾರು ನಡೆಸುತ್ತಾರೆ?

ಸಾಮಾನ್ಯ ಸೇವಾ ಕೇಂದ್ರಗಳು (CSC) ಮುಖ್ಯವಾಗಿ ಖಾಸಗಿ ಸಂಸ್ಥೆಗಳು ಅಥವಾ ವ್ಯಕ್ತಿಗಳ ಮೂಲಕ ನಿರ್ವಹಿಸಲಾಗುತ್ತವೆ ಮತ್ತು ಅವುಗಳನ್ನು ಸರಕಾರ ಬೆಂಬಲಿಸುತ್ತದೆ.

- **ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು**: CSC ಅನ್ನು ಸ್ಥಳೀಯ ಸಮುದಾಯಗಳಿಗೆ ಸೇವೆ ನೀಡುವ ಉದ್ದೇಶದೊಂದಿಗೆ ಖಾಸಗಿ ಉದ್ಯಮಿಗಳು ಅಥವಾ ಸಂಸ್ಥೆಗಳು ಪ್ರಾರಂಭಿಸಬಹುದು.
- **ಸರಕಾರದ ಬೆಂಬಲ:** ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು CSCಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ನೆರವು ನೀಡುತ್ತವೆ. ಸರ್ಕಾರವು ನಿರ್ದಿಷ್ಟವಾದ ಶ್ರೇಣಿಯ ಸೇವೆಗಳನ್ನು ಒದಗಿಸಲು ಮತ್ತು ಸ್ಥಳೀಯ ಸಮುದಾಯಗಳ ಅಭಿವೃದ್ಧಿಗಾಗಿ ನೆರವು ನೀಡುತ್ತದೆ.
- **ಸ್ಥಳೀಯ ಸಂಸ್ಥೆಗಳು:** ಸ್ಥಳೀಯ ಸಂಸ್ಥೆಗಳು ಅಖಅಗಳನ್ನು ನಿರ್ವಹಿಸುತ್ತವೆ. ಇವು ಸರ್ಕಾರದಿಂದ ನೀಡಲ್ಪಡುವ ಯೋಜನೆಗಳ ಮತ್ತು ಆರ್ಥಿಕ ನೆರವುಗಳ ಮಾಹಿತಿಯನ್ನು ಒದಗಿಸುತ್ತವೆ.

### ಸಹಕಾರ ಸಂಸ್ಥೆಗಳಿಗೆ ಈ ಅವಕಾಶ ಇದೆಯೇ?

ಸಹಕಾರ ಸಂಸ್ಥೆಗಳಿಗೆ ಸಾಮಾನ್ಯ ಸೇವಾ ಕೇಂದ್ರಗಳನ್ನು (CSC) ಸ್ಥಾಪಿಸಲು ಮತ್ತು ನಿರ್ವಹಿಸಲು ಅವಕಾಶ ಇದೆ. ಸಹಕಾರ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿ, ಸ್ಥಳೀಯ ಸೇವೆಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವರು ಸರಕಾರದ ಮಾರ್ಗದರ್ಶನದ ಅಡಿಯಲ್ಲಿ CSCಗಳನ್ನು ಪ್ರಾರಂಭಿಸಬಹುದು. ಮತ್ತು ತಮ್ಮ ಸಮುದಾಯಗಳಿಗೆ ವಿವಿಧ ಸೇವೆಗಳನ್ನು ಒದಗಿಸಬಹುದಾಗಿದೆ. ಈ ಮೂಲಕ, ಸಹಕಾರ ಸಂಸ್ಥೆಗಳು ಸ್ಥಳೀಯ ಜನರಿಗೆ ಸರ್ಕಾರಿ ಸೇವೆಗಳು ಮತ್ತು ಮಾಹಿತಿಗಳನ್ನು ಸುಲಭವಾಗಿ ಒದಗಿಸಲು ಸಹಾಯ ಮಾಡಬಹುದು.

### ಅವಕಾಶ ಇದ್ದರೆ ನೋಂದಣಿ ಹೇಗೆ – ವಿಧಾನಗಳು?

ಸಾಮಾನ್ಯ ಸೇವಾ ಕೇಂದ್ರ (CSC) ಪ್ರಾರಂಭಿಸಲು ಸಹಕಾರ ಸಂಸ್ಥೆಗಳಿಗೆ ನೋಂದಣಿ ಪ್ರಕ್ರಿಯೆ:

- CSC ಪ್ರಾರಂಭಿಸಲು ಬಯಸುವ ಸಹಕಾರ ಸಂಸ್ಥೆ ಯಾವುದೇ ಸ್ಥಳೀಯ ಅಥವಾ ರಾಜ್ಯ ಮಟ್ಟದ ಸರ್ಕಾರದ ಮಾರ್ಗಸೂಚಿಗಳನ್ನು ತಿಳಿದುಕೊಳ್ಳಬೇಕು.
- CSC ಯೋಜನೆಯ ಅಧಿಕೃತ ವೆಬ್‌ಸೈಟ್‌ನಲ್ಲಿ (eDistrict ಅಥವಾ CSC SPV) ಆನ್‌ಲೈನ್ ನೋಂದಣಿ ಅರ್ಜಿಯನ್ನು ಭರ್ತಿಮಾಡಬೇಕು.
- ನೋಂದಣಿಗೆ ಅಗತ್ಯವಿರುವ ದಾಖಲೆಗಳು ಹಾಗೂ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರವನ್ನು ಜೋಡಿಸಿ ಸಲ್ಲಿಸಬೇಕು.
- ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಲಾಗುತ್ತದೆ ಮತ್ತು ಅಗತ್ಯವಿದ್ದರೆ ಅಧಿಕಾರಿಗಳಿಂದ ಸಂಪರ್ಕಿಸಲಾಗುತ್ತದೆ.
- ಪರಿಶೀಲನೆಯ ನಂತರ CSC ಸ್ಥಾಪನೆಗಾಗಿ ಅನುಮತಿ ನೀಡಲಾಗುತ್ತದೆ.
- ಅನುಮತಿ ಪಡೆದುಕೊಂಡ ನಂತರ, ಸ್ಥಳವನ್ನು ಆಯ್ಕೆ ಮಾಡಬೇಕು ಮತ್ತು CSC ಸ್ಥಾಪಿಸಲು ಅಗತ್ಯವಿರುವ ಮೂಲಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು.
- CSC ಕಾರ್ಯನಿರ್ವಹಣೆಗೆ ಅಗತ್ಯವಿರುವ ತರಬೇತಿ ಪಡೆದುಕೊಳ್ಳುವುದು ಉತ್ತಮ.
- ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ, CSC ಅನ್ನು ಉದ್ಘಾಟಿಸಬಹುದು.

ಈ ನೋಂದಣಿ ಪ್ರಕ್ರಿಯೆ ಸ್ಥಳಗಳ ಆಧಾರದ ಮೇಲೆ ಬದಲಾಗಬಹುದು. ಆದ್ದರಿಂದ ಸಂಬಧಿಸಿದ ಸ್ಥಳೀಯ ಅಧಿಕಾರಿಗಳಿಗೆ ಖುದ್ದಾಗಿ ಭೇಟಿಯಾಗಿ ಸಂಪೂರ್ಣ ಮಾಹಿತಿಯನ್ನು ಪಡೆಯುವುದು ಸೂಕ್ತವಾಗಿರುತ್ತದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003